ಸಂಪುಟ : 8 ಸಂಚಿಕೆ : 191 ಪುಟ : 4 ಬೆಲೆ : 3.00 ಶನಿವಾರ ಸೆಪ್ಟೆಂಬರ್ 02, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 191 Pages : 4 Price : 3.00 Saturday September 02, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿದ ಸಚಿವ ಎಚ್.ಕೆ ಪಾಟೀಲ ಅಭಿಮತ

# 'ಪಂಚಾಯತರಾಜ್ ವ್ಯವಸ್ಥೆಯಲ್ಲಿ ಅಗಾಧ ಶಕ್ತಿಯಿದೆ'



**■ ವಿಜಯಸಾಕ್ಷಿ ಸುದ್ದಿ, ಗದಗ**

ಸಂವಿಧಾನದ 73ನೇ ತಿದ್ದುಪಡಿ ತಂದ ನಂತರದ 30 ವರ್ಷ ನಡೆದು ಬಂದ ಹಾದಿಯ ಅವಲೋಕನ ಮಾಡುವದು 'ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ ರಾಜ್, ಕರ್ನಾಟಕ ರಾಜ್ಯದಲ್ಲಿ ಒಂದು ಪಯಣ' ರಾಷ್ಟ್ರೀಯ ವಿಚಾರ ಸಂಕೀರಣದ ಉದ್ದೇಶವಾಗಿದೆ ಎಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಹೇಳಿದರು.

ನಾಗಾವಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದಲ್ಲಿ ಶುಕ್ರವಾರ ಜರುಗಿದ ಎರಡು ದಿನಗಳ 'ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ ರಾಜ್ ಕರ್ನಾಕ ರಾಜ್ಯದಲ್ಲಿ ಒಂದು ಪಯಣ' ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಾತ್ಮಾ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಪಂಚಾಯತ ರಾಜ್ ವ್ಯವಸ್ಥೆಯಲ್ಲಿ ಭಾರತೀಯ ಸಂವಿಧಾನದ 73ನೇ ತಿದ್ದುಪಡಿ ತರಲು ಅವಿರತ ▶▶ 3ನೇ ಪುಟಕ್ಕೆ

> ಬರುವ ದಿನಮಾನಗಳಲ್ಲಿ ಇಡೀ ರಾಷ್ಟ್ರಕ್ಕೆ ಗ್ರಾಮಗಳ ಅಭಿವೃದ್ಧಿ ಕುರಿತು ಮಾರ್ಗದರ್ಶನ ನೀಡುವ ಕಾರ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯದಿಂದ ಮಾಡುವಂತಾಗಲಿ. ಪಂಚಾಯತರಾಜ್ ವ್ಯವಸ್ಥೆಯಲ್ಲಿ ಅಗಾಧ ಶಕ್ತಿಯಿದೆ. 15 ಸಾವಿರಕ್ಕೂ ಹೆಚ್ಚು ಗ್ರಾಮ ಸಭೆಗಳನ್ನು 80 ಸಾವಿರಕ್ಕೂ ಹೆಚ್ಚು ಕೆಲಸಗಳನ್ನು ನಿಗದಿಪಡಿಸಿ, ತಳಮಟ್ಟದಿಂದ ಮೇಲ್ಮಟ್ಟದವರೆಗೆ ಕಾರ್ಯ ಮಾಡಲು ಯೋಜನೆಗಳನ್ನು ರೂಪಿಸಿದ್ದೆವು. ಪಂಕ್ಷನ್, ಫಂಕ್ಷನರಿ ಹಾಗೂ ಫಂಡ್‌ಗಳ ಮೂಲಕ ಪಂಚಾಯಿತಿಗಳಿಗೆ ಜವಾಬ್ದಾರಿ ನೀಡಲಾಯಿತು. 21 ಅಂಶಗಳ ಕಾರ್ಯಕ್ರಮಗಳನ್ನು ನರೇಗಾ ಯೋಜನೆಯಡಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ನಮ್ಮ ಪಂಚಾಯತಗಳ ವ್ಯವಸ್ಥೆ ಉತ್ತಮವಾಗಿದ್ದು, ಅವುಗಳ ಬಲವರ್ಧನೆಗೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
>
> **– ಎಚ್.ಕೆ ಪಾಟೀಲ.**
>
> ಕಾನೂನು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು.



ಪಂಚಾಯತ ವ್ಯವಸ್ಥೆಯಲ್ಲಿನ ಜನ ಪ್ರತಿನಿಧಿಗಳು ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿರಬೇಕು. ಗದಗ ಜಿಲ್ಲೆಯು ಗ್ರಾಮ ಪಂಚಾಯಿತಿ ಹಂತದಲ್ಲಿ ತಳಮಟ್ಟದಿಂದ ಮೆಲ್ಮಟ್ಟಕ್ಕೆ ಯೋಜನೆ ರೂಪಿಸಿವದರಲ್ಲಿ ಮುಂಚೂಣಿಯಲ್ಲಿದೆ. ಗ್ರಾಮಗಳು ವ್ಯಾಜ್ಯ ಮುಕ್ತ, ತ್ಯಾಜ್ಯ ಮುಕ್ತ, ಶೋಷಣೆ ಮುಕ್ತ, ಭಯ ಮುಕ್ತ, ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿಸುವ ಕಾನೂನುಗಳನ್ನು ನೀಡಲಾಗಿದೆ. ವಿಶ್ವವಿದ್ಯಾಲಯದ ಪ್ರತಿ ಐದು ವಿದ್ಯಾರ್ಥಿಗಳಿಗೆ ಒಂದೊಂದು ಗ್ರಾಮಗಳನ್ನು ನೀಡಿ, ಗ್ರಾಮಗಳ ಅಭಿವೃದ್ಧಿಗೆ ಮುಂದಾಗಬೇಕು ಎಂದು ಸಚಿವರು ಕರೆ ನೀಡಿದರು.

### ಕೇಂದ್ರ ಸರ್ಕಾರದ 'ಒಂದು ದೇಶ ಒಂದು ಚುನಾವಣೆ' ಕುರಿತು ಸಚಿವ ಪಾಟೀಲ ಪ್ರತಿಕ್ರಿಯೆ

# ಅಧಿಕಾರ ಉಳಿಸಿಕೊಳ್ಳುವ ಪ್ರಯತ್ನ ಸಲ್ಲದು

**■ ವಿಜಯಸಾಕ್ಷಿ ಸುದ್ದಿ, ಗದಗ**

ಕೇಂದ್ರ ಸರಕಾರ ಒಂದು ದೇಶ ಒಂದು ಚುನಾವಣೆ ಹೆಸರಿನಲ್ಲಿ ತನ್ನ ಅವಧಿಯಯನ್ನು ಮುಂದೂಡುವ ಪ್ರಯತ್ನ ಮಾಡಿದರೆ ಜನ ಸಹಿಸುವುದಿಲ್ಲ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ ಪಾಟೀಲ ಎಚ್ಚರಿಸಿದರು.

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಜನ ಕೇಂದ್ರ ಸರಕಾರದ ಮೇಲೆ ಸಂಪೂರ್ಣ ಭರವಸೆ ಕಳೆದುಕೊಂಡಿದ್ದಾರೆ. ಒಂದೇ ದೇಶ, ಒಂದು ಚುನಾವಣೆ ಹೆಸರಿನಲ್ಲಿ ಅವಧಿ ಮುಂದೂಡುವ ಯಾವುದೇ ನೈತಿಕತೆ ಕೇಂದ್ರದ ಬಿಜೆಪಿ ಸರಕಾರಕ್ಕಿಲ್ಲ ಎಂದು ಟೀಕಿಸಿದರು.




ಸಮಯ ಹಾಗೂ ಹಣದ ಉಳಿತಾಯದ ಹೆಸರಿನಲ್ಲಿ ಅಧಿಕಾರ ಉಳಿಸಿಕೊಳ್ಳುವುದನ್ನು ದೇಶದ ಪ್ರಜ್ಞಾವಂತ ಜನತೆ ಸಹಿಸುವುದಿಲ್ಲ. ಅಧಿಕಾರಕ್ಕೆ ಬಂದ ಸಂದರ್ಭದಲ್ಲಿಯೇ ಒಂದು ದೇಶ-ಒಂದು ಚುನಾವಣೆಯ ಬಗ್ಗೆ ಮಾತಾಡಿದ್ದರು. ಆದರೆ, ಇಷ್ಟು ವರ್ಷ ಸುಮ್ಮನಿದ್ದು, ಈಗ ಲೋಕಸಭೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ಆ ಬಗ್ಗೆ ಚರ್ಚೆ ಮಾಡುವ ಹಿಂದಿನ ಉದ್ದೇಶವೇನು ಎಂದು ಪ್ರಶ್ನಿಸಿದರು.

ಕೇಂದ್ರ ಚುನಾವಣಾ ಆಯೋಗ ಲೋಕಸಭೆ ಚುನಾವಣೆಯ ತಯಾರಿ ಆರಂಭಿಸಿದೆ. ಜಿಲ್ಲಾ ಕೇಂದ್ರಗಳಿಗೆ ಈಗಾಗಲೇ ಇವಿಎಂ ಯಂತ್ರಗಳು ಬಂದಿವೆ. ಚುನಾವಣಾ ಅಧಿಕಾರಿಗಳು ಎಲ್ಲ ರಾಜಕೀಯ ಪಕ್ಷದ ಮುಖಂಡರನ್ನು ಇವಿಎಂ ಪರೀಕ್ಷೆಗೆ ಆಹ್ವಾನಿಸಿದ್ದಾರೆ. ಹೀಗಿರುವ ಸಮಯದಲ್ಲಿ ಒಂದು ದೇಶ ಒಂದು ಚುನಾವಣೆಗೆ ಸಮಿತಿ ರಚಿಸಿರುವುದರ ಹಿಂದೆ ದುರುದ್ದೇಶ ಅಡಗಿದೆ. ರಾಷ್ಟ್ರಪತಿ ರಾಮನಾಥ ಕೋವಿಂದ್ ಬಗ್ಗೆ ವಿಶೇಷ ಗೌರವವಿದೆ. ಆದರೆ, ಅವರು ಪೂರ್ವಾಶ್ರಮದ ವಾಸನೆ ಕಳೆದುಕೊಂಡಿದ್ದಾರಾ ಎಂದು ಯಾರಾದರೂ ಪ್ರಶ್ನೆ ಮಾಡಿದರೆ ಹೇಗೆ? ಪ್ರಧಾನಿ ಮೋದಿ ಅವರ ಆಶಯ ಒಳ್ಳೆಯದೇ ಆಗಿದ್ದರೆ ವೆಂಕಟಾಚಲಯ್ಯ ಅವರಂಥ ರಾಜಕೀಯ ವಾಸನೆ ಇಲ್ಲದ ವ್ಯಕ್ತಿಗಳ ನೇತೃತ್ವದಲ್ಲಿ ಸಮಿತಿ ಮಾಡಬೇಕಿತ್ತು ಎಂದು ಸಚಿವರು ಸವಾಲು ಹಾಕಿದರು.

# ಸಚಿವ ಎಚ್.ಕೆ ಪಾಟೀಲ ಅವರ ಪ್ರವಾಸ

**■ ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ ಪಾಟೀಲ ಅವರ ಸೆ.2 ಹಾಗೂ 3ರ ಪ್ರವಾಸದ ವಿವರ ಇಂತಿದೆ.



ಸೆ.2 ಶನಿವಾರದಂದು ಮುಂಜಾನೆ 11 ಗಂಟೆಗೆ ಶಿರಹಟ್ಟಿ ತಾಲೂಕು ಪಂಚಾಯಿತಿ ಆವರಣದಲ್ಲಿ ತಾಲೂಕು ಪ್ರಗತಿ ಪರಿಶೀಲನೆ ನಡೆಸುವರು. ಮಧ್ಯಾಹ್ನ 1 ಗಂಟೆಗೆ ಪಕ್ಷದ ಕಾರ್ಯಾಲಯಕ್ಕೆ ಭೇಟಿ ನೀಡಿ ಪತ್ರಿಕಾಗೋಷ್ಠಿ ನಡೆಸಿ, ಗದುಗಿನಲ್ಲಿ ವಾಸ್ತವ್ಯ ಮಾಡುವರು.

ಸೆ.3 ಭಾನುವಾರದಂದು ಬೆಳಿಗ್ಗೆ 10.15ಕ್ಕೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಆವರಣದಲ್ಲಿನ ಸುವರ್ಣ ಮಹೋತ್ಸವ ಭವನದಲ್ಲಿ ಪ್ರೊ. ಸಿ.ಎಸ್ ಪಾಟೀಲ ಅಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮುಂಜಾನೆ 11.30 ಗಂಟೆಗೆ ಹುಬ್ಬಳ್ಳಿಯ ಚೇಂಬರ್ ಆಫ್ ಕಾಮರ್ಸ್ ಹಾಲ್‌ನಲ್ಲಿ ಬೆಣ್ಣೆಹಳ್ಳ ಸಂರಕ್ಷಣಾ ಸಮಿತಿ ಧಾರವಾಡ ಜಿಲ್ಲೆಯ ಪರವಾಗಿ ನೂತನ ಸಚಿವರು ಹಾಗೂ ಶಾಸಕರಿಗೆ ಸನ್ಮಾನ ಕಾರ್ಯಕ್ರಮ ಮತ್ತು ಬೆಣ್ಣೆಹಳ್ಳಕ್ಕೆ ಶಾಶ್ವತ ಪರಿಹಾರ ಒದಗಿಸುವ ಕುರಿತು ಜರಗುವ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 12.30 ಗಂಟೆಗೆ ಬಿಂಕದಕಟ್ಟಿಯ ಕುಡ ಒಕ್ಕಲಿಗರ ಭವನದಲ್ಲಿ ಏರ್ಪಡಿಸಿರುವ ಅಖಿಲ ಕರ್ನಾಟಕ ಕುಡ ಒಕ್ಕಲಿಗರ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟನೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 12.45ಕ್ಕೆ ಗದಗ ನಗರದ ತೋಂಟದ ಸಿದ್ದಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 1.15ಕ್ಕೆ ಪಂ. ಭೀಮಸೇನ ಜೋಶಿ ರಂಗಮಂದಿರದಲ್ಲಿ ಜರುಗುವ ಗದಗ ಜಿಲ್ಲಾ ಚಲವಾದಿ ಮಹಾಸಭಾ ಜಿಲ್ಲಾ ಮಟ್ಟದ ಚಿಂತನ ಸಮಾವೇಶದಲ್ಲಿ ಪಾಲ್ಗೊಳ್ಳುವರು.

ಸಾಯಂಕಾಲ 4 ಗಂಟೆಗೆ ನಗರದ ಕಳಸಾಪುರ ರಸ್ತೆಯ ಒಳಾಂಗಣ ಕ್ರೀಡಾಂಗಣದ ಹಿಂದುಗಡೆ ನಿರ್ಮಾಣಗೊಂಡಿರುವ ಈಜುಗೊಳ ಉದ್ಘಾಟನೆ ಹಾಗೂ ಸಾಯಂಕಾಲ 4.30ಗಂಟೆಗೆ ಬೆಟಗೇರಿಯ ಗಾಂಧಿ ನಗರದಲ್ಲಿನ ಹಾಕಿ ಸ್ಟೇಡಿಯಂ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಸಚಿವರ ಕಾರ್ಯಾಲಯದ ಮೂಲಗಳು ತಿಳಿಸಿವೆ.

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ಸೆಪ್ಟೆಂಬರ್ 02 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ**

ವಾರ್ಡ್ ನಂ. 29ರಲ್ಲಿ ರಾಜೀವಗಾಂಧಿನಗರ, ಡಂಬಳ ಲೈನ್, ಗುಂಪಿನ ಲೈನ್, ಭಾಂಡಗೆ ಲೈನ್, ವಾರ್ಡ್ ನಂ. 35ರಲ್ಲಿ 9ನಂ ಶಾಲೆ, ದೇವರಾಜ ಹಾಸ್ಟೆಲ್ ಲೈನ್, ಆದರ್ಶನಗರ ಬಾಲಾಜಿನಗರ ಪತ್ತಾರ ಸರ್ ಲೈನ್, ವಾರ್ಡ್ ನಂ. 5, 6, ಭಜಂತ್ರಿ ಓಣಿ, ಅಂಬೇಡ್ಕರ ನಗರ, ಹೂಲಿಯವರ ಲೈನ್, ಜಮಲಮ್ಮನಗುಡಿ ಲೈನ್, ಹಾದಿಮನಿಯವರ ಲೈನ್, ಸಿದ್ದಲಿಂಗನಗರ, ರೊಟ್ಟಿಯವರ ಲೈನ್, ನಾವಳ್ಳಿಯವರ ಲೈನ್, ಉಳಿದ ಕೆಲವು ಭಾಗಗಳು, ವಾರ್ಡ್ ನಂ. 01ರ ಎಸ್. ಎಮ್.ಕೃಷ್ಣನಗರ ಮೇಲಿನ ಭಾಗ, ವಾರ್ಡ್ ನಂ. 33ರಲ್ಲಿ ಕಲಾಲ ಅವರ ಮನೆ ಲೈನ್, ಅಬ್ಬಿಗೇರಿ ಲೈನ್, ಕೇಶವನಗರ ಭಾಗ-1, ಭಾಗ-2, ಮುಳಗುಂದ ರೋಡ್. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರ ಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾರಿಗೆ ಬಸ್ ಪಲ್ಟಿ: ತಪ್ಪಿದ ಅನಾಹುತ

**■ ವಿಜಯಸಾಕ್ಷಿ ಸುದ್ದಿ, ರೋಣ**

35 ಪ್ರಯಾಣಿಕರನ್ನು ಹೊತ್ತು, ಗಜೇಂದ್ರಗಡದಿಂದ ಅರಸಿಕೇರಿಗೆ ಹೊರಟಿದ್ದ ಗಜೇಂದ್ರಗಡ ಘಟಕದ ಬಸ್ ನಿಡಗುಂದಿ ಗ್ರಾಮದ ಬಳಿ ಶುಕ್ರವಾರ ಪಲ್ಟಿಯಾಗಿದೆ. ಸಣ್ಣಪುಟ್ಟ ಗಾಯಗಳನ್ನು ಹೊರತುಪಡಿಸಿ ಪ್ರಯಾಣಿಕರೆಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗಜೇಂದ್ರಗಡ ಸಾರಿಗೆ ಘಟಕಕ್ಕೆ ಸೇರಿದ್ದ ಬಸ್ ಗದಗ ಮಾರ್ಗವಾಗಿ ಅರಸಿಕೇರಿಗೆ ಹೊರಟ್ಟಿತ್ತು.



ಮಾರ್ಗಮಧ್ಯ ನಿಡಗುಂದಿ ಗ್ರಾಮದ ಬಳಿ ಬಸ್‌ನ ಮುಂದಿನ ಭಾಗದ ಪಾಟ ತುಂಡಾದ ಪರಿಣಾಮ, ರಸ್ತೆಯ ಬದಿಯಲ್ಲಿರುವ ಕಂದಕಕ್ಕೆ ಬಸ್ ಉರುಳಿ ಬಿದ್ದಿದೆ. ಬಸ್ ಚಾಲಕ ತೀವ್ರವಾಗಿ ಗಾಯಗೊಂಡಿದ್ದು, ಗದಗ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಯಿತು.

ಬಸ್ ಚಾಲಕನ ಸಮಯಪ್ರಜ್ಞೆಯಿಂದ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎನ್ನಲಾಗಿದ್ದು, ಮುಂಬಾಗದ ಪಾಟ ತುಂಡಾಗುತ್ತಿದ್ದಂತೆ ಎಚ್ಚರ ವಹಿಸಿದ ಚಾಲಕ, ಬಸ್‌ನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಜಾಗೃತೆಯಿಂದ ▶▶ 3ನೇ ಪುಟಕ್ಕೆ

## ಶಿಕ್ಷಕರ ಅರ್ಹತಾ ಪರೀಕ್ಷಾರ್ಥಿಗಳ ಗಮನಕ್ಕೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಶಿಕ್ಷಕರ ಅರ್ಹತಾ ಪರೀಕ್ಷೆಯು ಸೆ.3 ಭಾನುವಾರದಂದು ಗದಗ ಜಿಲ್ಲೆಯ 19 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದೆ. ಪರೀಕ್ಷಾರ್ಥಿಗಳ ಪರೀಕ್ಷೆಗೆ ಹಾಜರಾಗುವ ಪರೀಕ್ಷಾರ್ಥಿಗಳು ಆನ್‌ಲೈನ್ ನಲ್ಲಿ ಪ್ರವೇಶ ಪತ್ರ ಡೌನಲೋಡ್ ಮಾಡಿಕೊಳ್ಳಬೇಕು. ಪರೀಕ್ಷಾ ದಿನದಂದು ಮು. 8 ಗಂಟೆಗೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ಪತ್ರದಲ್ಲಿ ತಿಳಿಸಿದಂತ ಗುರುತಿನ ಚೀಟಿ, ಆಧಾರ ಮೂಲ ಪ್ರತಿಯನ್ನು ಕಡ್ಡಾಯವಾಗಿ ತರುವುದು. ಪರೀಕ್ಷಾ ಕೇಂದ್ರದಲ್ಲಿ ಯಾವುದೇ ತರಹದ ಎಲೆಕ್ಟ್ರಾನಿಕ್ ಸಾಮಗ್ರಿಗಳು, ಫೋನ್, ವಾಚ್ ಮುಂತಾದ ವಸ್ತುಗಳನ್ನು ತರುವುದನ್ನು ನಿಷೇಧಿಸಲಾಗಿರುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮುಖ್ಯ ಅಡುಗೆದಾರರು ಮತ್ತು ಸಹಾಯಕ ಅಡುಗೆದಾರರಿಗೆ ಒಂದು ದಿನದ ಕಾರ್ಯಾಗಾರ

# ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಪೂರೈಕೆಗೆ ಆದ್ಯತೆ ನೀಡಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ ಯೋಜನೆಯಡಿ ಶಾಲಾ ವಿದ್ಯಾರ್ಥಿಗಳಿಗೆ ಪೂರೈಸಲಾಗುವ ಆಹಾರ ಗುಣಮಟ್ಟದಿಂದ ಕೂಡಿರಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ.ರಡ್ಡೇರ ಹೇಳಿದರು.

ಲೋಯೊಲಾ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಜರುಗಿದ ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ ಯೋಜನೆಯಡಿ ಮುಖ್ಯ ಅಡುಗೆ ಸಿಬ್ಬಂದಿ ಹಾಗೂ ಸಹಾಯಕ ಅಡುಗೆ ಸಿಬ್ಬಂದಿಯವರಿಗೆ ಆಯೋಜಿಸಲಾಗಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.




ಅಡುಗೆದಾರರು ತಾವು ತಯಾರಿಸುವ ಅಡುಗೆ ಕೋಣೆಯನ್ನು ಸ್ವಚ್ಛವಾಗಿಡಲು ಪ್ರಥಮಾದ್ಯತೆ ನೀಡಬೇಕು ಎಂದರು. ಅಲ್ಲದೆ ಅಡುಗೆಗೆ ಬಳಸಲಾಗುವ ಆಹಾರ ಪದಾರ್ಥಗಳ ಸ್ವಚ್ಛತೆಯಿಂದ ಇರುವಂತೆ ನೋಡಿಕೊಳ್ಳಬೇಕು. ಅಡುಗೆಗೆ ಬಳಸಲಾಗುವ ಪಾತ್ರೆ ಪರಿಕರಗಳ ಸ್ವಚ್ಛತೆ ಬಗ್ಗೆ ಮಾರ್ಗದರ್ಶನ ನೀಡಿದ ಅವರು ವಿದ್ಯಾರ್ಥಿಗಳಿಗೆ ಪೂರೈಸಲಾಗುವ ಆಹಾರದ ಗುಣಮಟ್ಟದಲ್ಲಿ ಯಾವುದೇ ರೀತಿ ನಿರ್ಲಕ್ಷ್ಯ ತೋರದಂತೆ ಹೇಳಿದರು. ಅಡುಗೆದಾರರ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಗಮನ ಹರಿಸಬೇಕು. ಅಲ್ಲದೇ ಬಿಸಿ ಊಟಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸೂಕ್ತವಾಗಿ ನಿರ್ವಹಿಸುವಂತೆ ತಿಳಿಸಿದರು.

ಗದಗ ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ವ್ಹಿ ವ್ಹಿ ನಡುವಿನಮನಿ ಮಾತನಾಡಿ, ಮಕ್ಕಳ ಮನಸ್ಸು ಮೃದುವಾಗಿದ್ದು, ಮಕ್ಕಳ ಮನಸ್ಸಿನಂತೆಯೇ ಪಾಠವು ಎಷ್ಟು ಮುಖ್ಯವಾಗಿದೆಯೋ ಅದೇ ರೀತಿ ಬಿಸಿಯೂಟವು ಸಹ ಮುಖ್ಯ ಅದನ್ನು ಕಾಳಜಿ ಪೂರ್ವಕವಾಗಿ ಪ್ರೀತಿ, ಮಮತೆ, ▶▶ 3ನೇ ಪುಟಕ್ಕೆ

## ಸಚಿವ ಎಚ್.ಕೆ ಪಾಟೀಲ ಶಿರಹಟ್ಟಿ ಭೇಟಿ ಇಂದು

**■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿಯ ತಾ.ಪಂ ಸಾಮರ್ಥ್ಯಸೌಧದಲ್ಲಿ ರಾಜ್ಯ ಕಾನೂನು ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಎಚ್.ಕೆ ಪಾಟೀಲರು ಶನಿವಾರ ಬೆಳಿಗ್ಗೆ 11 ಗಂಟೆಗೆ ತಾಲೂಕಾ ಪ್ರಗತಿ ಪರಿಶೀಲನೆ ಸಭೆಯನ್ನು ನಡೆಸಲಿದ್ದಾರೆ.

ಮಧ್ಯಾಹ್ನ 1 ಗಂಟೆಗೆ ಶ್ರೀ ವಾಲ್ಮೀಕಿ ಭವನದಲ್ಲಿ ಪಕ್ಷದ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿ, ತದನಂತರ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಲಿದ್ದಾರೆ ಎಂದು ಶಿರಹಟ್ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹುಮಾಯೂನ್ ಮಾಗಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಕ್ಷಿ ಸುಭಾಷಿತ

ಮನುಷ್ಯ ಕಲಿಯಲು ಬಯಸುವದಾದರೆ ಅವನ ತಪ್ಪಿನಿಂದಲೇ ಕಲಿಯಬಹುದು. ಪ್ರತಿಯೊಂದು ತಪ್ಪು ಅವನಿಗೆ ಏನಾದರೂ ಶಿಕ್ಷಣವನ್ನು ಖಂಡಿತಾ ಕೊಡುತ್ತದೆ

–ಡಿಕ್ಕನ್ ಚಾರ್ಲ್ಸ್

## ಸಂಪಾದಕೀಯ

# ಬಲಗೊಳ್ಳಬೇಕಿದೆ ನ್ಯಾಯದಾನ ವ್ಯವಸ್ಥೆ

ಸುಳ್ಳು ಮಾಹಿತಿ ನೀಡಿ ಚುನಾವಣೆಯಲ್ಲಿ ಸ್ಪರ್ಧಿಸಿದ ಆರೋಪದ ಹಿನ್ನೆಲೆಯಲ್ಲಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಪ್ರಜ್ವಲ್ ರೇವಣ್ಣ ಅವರನ್ನು ಹಾಸನ ಸಂಸದ ಸ್ಥಾನದಿಂದ ಅನರ್ಹಗೊಳಿಸಿ ಆದೇಶ ಹೊರಡಿಸಿದೆ. ಹೈಕೋರ್ಟ್ ತೀರ್ಪಿನಿಂದ ರಾಜ್ಯ ರಾಜಕಾರಣದಲ್ಲಿ ಸಂಚಲನ ಸೃಷ್ಟಿಯಾಗದಿದ್ದರೂ ದೇವೇಗೌಡ ಕುಟುಂಬಕ್ಕೆ ಬಹುದೊಡ್ಡ ಆಘಾತ ಎನ್ನಬಹುದು.

ಆದರೆ ಪ್ರಕರಣ ನಡೆದಿದ್ದು ಯಾವಾಗ, ಆರೋಪ ಮಾಡಿದವರು ಯಾರು, ತೀರ್ಪು ಬಂದಿದ್ದು ಯಾವಾಗ ಎನ್ನುವ ಪ್ರಶ್ನೆಗಳನ್ನು ಕೇಳಿಕೊಂಡರೆ, ನಮ್ಮ ನ್ಯಾಯಾಂಗ ವ್ಯವಸ್ಥೆ ಬಗ್ಗೆ ಕನಿಕರ ಮೂಡುತ್ತದೆ. ಕೋರ್ಟ್ ತೀರ್ಪನ್ನು ಗೌರವಿಸಬೇಕಾದದ್ದು ಎಲ್ಲರ ಕರ್ತವ್ಯ. ಹೈಕೋರ್ಟ್ ತೀರ್ಮಾನವನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಆದರೆ ತೀರ್ಪಿನ ಬಗ್ಗೆ ಪರಾಮರ್ಶೆ ಮಾಡಲು ಅವಕಾಶವಿದೆ. ಅದರ ಆಧಾರದ ಮೇಲೆ ನ್ಯಾಯದಾನ ವ್ಯವಸ್ಥೆಯನ್ನು ಪ್ರಶ್ನಿಸಬೇಕಿದೆ.

2019ರಲ್ಲಿ ಲೋಕಸಭೆ ಚುನಾವಣೆ ನಡೆದಾಗ ಆಗಿರುವ ಪ್ರಮಾದವನ್ನು ಮುಂದಿಟ್ಟುಕೊಂಡು ಪ್ರಜ್ವಲ್ ರೇವಣ್ಣ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ದೂರುದಾರ, ಮಾಜಿ ಸಚಿವ ಎ. ಮಂಜು ಆರೋಪ ಮಾಡಿದ್ದರು. ಆರೋಪ ಮಾಡಿದವರೆ ಜೆಡಿಎಸ್ ಶಾಸಕರಾಗಿರುವುದು ರಾಜಕಾರಣ ವೈಶಿಷ್ಟ ಎನ್ನಬಹುದು. ದೂರು ಪರಿಶೀಲಿಸಿ, ಪ್ರಜ್ವಲ್ ರೇವಣ್ಣ ತಪ್ಪು ಮಾಡಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಲಾಗಿದೆ. ಇಲ್ಲಿ ಸುಳ್ಳು ಮಾಹಿತಿ ನೀಡಿದ ಪ್ರಕರಣ ಇತ್ಯರ್ಥ ಮಾಡಲು ನಾಲ್ಕು ವರ್ಷ ಬೇಕಾಯಿತೆ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. ಚುನಾವಣೆ ಆಯೋಗಕ್ಕೆ ಮಾಹಿತಿ ನೀಡುವಾಗ ಎಲ್ಲ ದಾಖಲೆಗಳನ್ನು ಸ್ಪರ್ಧಿಗಳು ಒದಗಿಸಬೇಕು. ಅದು ಸರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ಪರೀಕ್ಷೆಗೆ ಒಳಪಡಿಸಲು ನಾಲ್ಕು ವರ್ಷ ಹಿಡಿದಿದ್ದು ಏಕೆ ಎನ್ನುವುದು ಬಹುದೊಡ್ಡ ಚರ್ಚೆಗೆ ಕಾರಣವಾಗಿದೆ.

ಚುನಾವಣೆ ಸಂದರ್ಭದಲ್ಲಿ ಕೊಟ್ಟ ದಾಖಲೆಗಳ ಸತ್ಯಾಸತ್ಯತೆ ಪರಿಶೀಲನೆಗೆ ಇಷ್ಟೊಂದು ಸಮಯ ತೆಗೆದುಕೊಂಡರೆ, ಇನ್ನುಳಿದ ಗಂಭೀರ ಪ್ರಕರಣಗಳಿಗೆ ಬೇಕಾಗುವ ಸಮಯ ಎಷ್ಟು ಎನ್ನುವುದನ್ನು ಅಂದಾಜಿಸಬಹುದಾಗಿದೆ. ಸದ್ಯ ಪ್ರಕರಣವನ್ನು ಪ್ರಶ್ನಿಸಿ ಪ್ರಜ್ವಲ್ ರೇವಣ್ಣ ಸುಪ್ರೀಂಕೋರ್ಟ್ ಮೆಟ್ಟಿಲೇರುತ್ತಾರೆ. ಅಲ್ಲಿ ಪ್ರಕರಣದ ವಿಚಾರಣೆ ಆರಂಭವಾಗುವ ವೇಳೆಗೆ 2024ರ ಲೋಕಸಭೆ ಚುನಾವಣೆಯೂ ಮುಗಿದಿರುತ್ತದೆ. 2024ರಲ್ಲಿ ಪ್ರಜ್ವಲ್ ಮತ್ತೊಮ್ಮೆ ಸಂಸದರಾಗುತ್ತಾರೊ ಇಲ್ಲವೊ ಗೊತ್ತಿಲ್ಲ. ಒಂದೊಮ್ಮೆ ಸಂಸದರಾದರೆ, ಸುಪ್ರೀಂ ಕೋರ್ಟಿನಲ್ಲಿ ಆರೋಪ ಮತ್ತೊಮ್ಮೆ ಸಾಬೀತಾದರೆ ಯಾವ ಶಿಕ್ಷೆ ನೀಡಲಾಗುತ್ತದೆ ಎನ್ನುವುದು ಗೊತ್ತಿಲ್ಲ. ನ್ಯಾಯದಾನ ಇಷ್ಟೊಂದು ವಿಳಂಬವಾದರೆ ಶಿಕ್ಷೆಗೆ ಯಾವುದೇ ಅರ್ಥ ಇರುವುದಿಲ್ಲ.



ರಕ್ಷಾ ಬಂಧನ ಹಬ್ಬದ ಅಂಗವಾಗಿ ವಿಡಿಎಸ್ ಕ್ಲಾಸಿಕ್ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಎಂ.ಆರ್ ಡೊಳ್ಳಿನ ಅವರಿಗೆ ಪ್ರಾಚಾರ್ಯರಾದ ಡಾ. ಗಂಗೂಬಾಯಿ ಪವಾರ ಅವರು ರಾಖಿ ಕಟ್ಟಿ ಆಶೀರ್ವಾದ ಪಡೆದುಕೊಂಡರು.

## ನೀವು ಜೀನ್ಸ್ ಪ್ರಿಯರಾಗಿದ್ದರೆ, ಈ ವಿಷಯಗಳನ್ನು ತಿಳಿಯಲೇಬೇಕು

# ಜೀನ್ಸ್ ಬಟ್ಟೆಯೆಂಬ ಸರ್ವಾಂತರ್ಯಾಮಿ



ಇಂದು ನಾವು, ಹುಟ್ಟಿನಿಂದಲೇ ತೊಟ್ಟು ಬಂದಿದ್ದೇವೇನೋ ಎನ್ನುವ ಮಟ್ಟಕ್ಕೆ ಒಪ್ಪಿಕೊಂಡಿರುವ ಜೀನ್ಸ್ ಬಟ್ಟೆಗಳ ಹಿಂದೆ ಬಲು ರೋಚಕವಾದ ಇತಿಹಾಸವೊಂದಿದೆ. ಹಲವಾರು ವರುಶಗಳ ಹಿಂದೆ ಮಾರುಕಟ್ಟೆಗೆ ಬಂದ, ಅಲ್ಲಲ್ಲಿ ಮಾಸಿ ಹೋದಂತೆ ಕಾಣುವ, ಒರಟಾದ ಹತ್ತಿ ಬಟ್ಟೆಯ ಈ ಜೀನ್ಸ್ ವಿಶೇಷವಾಗಿ ಪ್ಯಾಂಟ್, ಅತೀ ಕಡಿಮೆ ಅವಧಿಯಲ್ಲಿ ಎಲ್ಲಾ ವಯೋಮಾನದವರ ಮೆಚ್ಚುಗೆಗೆ ಪಾತ್ರವಾಯ್ತು. ಜೀನ್ಸ್ ಪ್ಯಾಂಟನ್ನು 1873ರಲ್ಲಿ ಜೇಕಬ್ ಡೇವಿಸ್ ಹಾಗೂ ಲೆವಿ ಸ್ಟ್ರಾಸ್ ಎಂಬ ಇಬ್ಬರು ಸೇರಿ ಅನ್ವೇಷಿಸಿದರು. ಇಂದು ಜನಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಿರುವ ಜೀನ್ಸ್ ಪ್ಯಾಂಟನ್ನು ಪ್ರಾರಂಭದಲ್ಲಿ ದನಗಾಹಿ ಯುವಕರು, ಗಣಿ ಕೆಲಸ ಮಾಡುವವರು, ಕಾರ್ಖಾನೆಗಳ ಕೆಲಸಗಾರರು ತೊಡಲೆಂದೇ ವಿನ್ಯಾಸ ಮಾಡಿದ್ದು!

ಜರ್ಮನಿಯ ನಿವಾಸಿ ಲೆವಿ ಸ್ಟ್ರಾಸ್ 1851ರಲ್ಲಿ ಅಣ್ಣನ ಜೊತೆ ಸೇರಿ ಕೆಲಸ ಮಾಡಲು ನ್ಯೂಯಾರ್ಕ್‌ಗೆ ಹೋದರು. ಇಬ್ಬರೂ ಸೇರಿ ಅಲ್ಲಿ ಬಂಗಾರದ ವ್ಯಾಪಾರ ಮಾಡುತ್ತಿದ್ದಾಗ, ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಬಂಗಾರದ ಬೇಡಿಕೆ ಹೆಚ್ಚಾಗಿದೆ ಎಂಬ ಸುದ್ದಿ ನ್ಯೂಯಾರ್ಕ್‌ನಲ್ಲಿ ಹರಡಿತು. ಇದನ್ನು ತಿಳಿದ ಲೆವಿ ಸ್ಟ್ರಾಸ್ ಅಲ್ಲಿಯೂ ತಮ್ಮ ವ್ಯಾಪಾರವನ್ನು ವಿಸ್ತರಿಸುವ ಉದ್ದೇಶದಿಂದ 1852ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋಗೆ ಹೋದರು. ಕೆಲವು ದಿನಗಳಲ್ಲಿಯೇ ಅವರು ಅಲ್ಲಿ ಬಂಗಾರದ ವ್ಯಾಪಾರದ ಜೊತೆಗೆ ಹತ್ತಿ ಬಟ್ಟೆಯ ವ್ಯಾಪಾರವನ್ನು ಆರಂಭಿಸಿದರು.

ಇನ್ನೊಂದು ಕಡೆಗೆ ಜೇಕಬ್ ಡೇವಿಸ್ ಎಂಬುವವರು ನೆವಾಡಾದ ರೆನೊ ನಗರದಲ್ಲಿ ಬಟ್ಟೆ ಹೊಲಿಯುವ ಕೆಲಸ ಮಾಡುತ್ತಿದ್ದರು. ಕುದುರೆ ಕಂಬಳಿಗಳು, ಟೆಂಟ್‌ಗೆ ಅಗತ್ಯವಿರುವ ಹೊದಿಕೆಗಳು ಹೀಗೆ ಬಗೆ ಬಗೆಯ ವಸ್ತುಗಳನ್ನು ಹೊಲಿಯುತ್ತಿದ್ದ ಅವರು, ತಮಗೆ ಅಗತ್ಯವಿರುವ ಬಟ್ಟೆಯನ್ನು ಲೆವಿ ಸ್ಟ್ರಾಸ್ ಅಂಗಡಿಯಿಂದ ಕೊಳ್ಳುತ್ತಿದ್ದರು. ಒಂದು ದಿನ ಗ್ರಾಹಕನೊಬ್ಬ ಅವರ ಅಂಗಡಿಗೆ ಬಂದು, ಗಟ್ಟಿ ಕೆಲಸವನ್ನು ತಡೆದುಕೊಳ್ಳುವ, ಸಾಧಾರಣವಾಗಿ ಹರಿಯದ ಒಂದು ಜೋಡಿ ಗಟ್ಟಿಮುಟ್ಟಾದ ಪ್ಯಾಂಟ್ ಹೊಲಿದುಕೊಡಲು ಕೇಳಿದ. ಲೆವಿ ಸ್ಟ್ರಾಸ್ ಅಂಗಡಿಯಿಂದ ಕೊಂಡಿದ್ದ ಡೆನಿಮ್ ಬಟ್ಟೆಯಿಂದ ಪ್ಯಾಂಟ್ ಹೊಲಿದು, ಪ್ಯಾಂಟ್‌ನಲ್ಲಿ ಬೇಗ ಹರಿದು ಹೋಗುವ ಜಾಗಗಳಾದ ಜೇಬಿನ ತುದಿಗಳಿಗೆ ಕಾಪರ್ ರಿವೆಟ್ಸ್‌ಗಳನ್ನಿರಿಸಿದರು.

ಇದರಿಂದ ಪ್ಯಾಂಟ್ ಇನ್ನೂ ಹೆಚ್ಚು ಗಟ್ಟಿಮುಟ್ಟಾಯಿತು. ಗ್ರಾಹಕ ಫುಲ್ ಖುಷ್! ಈ ಬಗೆಯ ಪ್ಯಾಂಟಿನ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಯಿತು. ಪ್ಯಾಂಟ್‌ಗಳ ವ್ಯಾಪಾರವನ್ನು ಇನ್ನಷ್ಟು ವಿಸ್ತಿಸಲು ಬಂಡವಾಳದ ಕೊರತೆಯಾದಾಗ, ಡೇವಿಸ್ ಲೆವಿ ಸ್ಟ್ರಾಸ್ ಜೊತೆಗೆ ಒಪ್ಪಂದ ಮಾಡಿಕೊಳ್ಳಲು ಪತ್ರ ಬರೆದ. ಇದಕ್ಕೆ ಲೆವಿ ಸ್ಟ್ರಾಸ್ ಕೂಡ ಒಪ್ಪಿದಾಗ, 1873ರಲ್ಲಿ ಇಬ್ಬರ ಪಾಲುದಾರಿಕೆಯಲ್ಲಿ ಲೆವಿ ಸ್ಟ್ರಾಸ್ ಆಂಡ್ ಕಂಪನಿ ಎಂಬ ಹೆಸರಿನ ಕಂಪನಿಯೊಂದು ಉದಯಿಸಿತು.

18ನೇ ಶತಮಾನದಲ್ಲಿ ಇಟಲಿಯ ಜಿನೋವಾ ನಗರದಲ್ಲಿ ಒರಟಾದ ಕಾಟನ್ ಬಟ್ಟೆಯನ್ನು ತಯಾರಿಸಲಾಗುತ್ತಿತ್ತು. ಹಡಗುಗಳ ಮೂಲಕ ಈ ಬಟ್ಟೆಯನ್ನು ಜಿನೋವಾದಿಂದ ಯುರೋಪಿನ ಬೇರೆ ಬೇರೆ ಭಾಗಗಳಿಗೆ ಕಳುಹಿಸಲಾಗುತ್ತಿತ್ತು. ಜಿನೋವಾದಲ್ಲಿನ ನಾವಿಕರು ಈ ಒರಟಾದ ಹತ್ತಿ ಬಟ್ಟೆಗೆ ‘ಜೀನ್’ ಎಂದು ಕರೆಯುತ್ತಿದ್ದರು. ಇನ್ನು ಜೀನ್ಸ್ ಪ್ಯಾಂಟನ್ನು ಕೂಡ ಡೆನಿಮ್ ಎಂಬ ಒರಟಾದ ಕಾಟನ್ ಬಟ್ಟೆಯಿಂದ ತಯಾರಿಸಲಾಗುವುದರಿಂದ ಇದನ್ನು ‘ಜೀನ್ ಪ್ಯಾಂಟ್’ ಎಂದು ಕರೆದರು. ಮುಂದಿನ ದಿನಗಳಲ್ಲಿ ಈ ಪ್ಯಾಂಟ್‌ಗಳ ಹೆಸರು ಎಲ್ಲೆಲ್ಲೋ ಹರಿದಾಡಿ, ಕೊನೆಯಲ್ಲಿ ‘ಜೀನ್ಸ್ ಪ್ಯಾಂಟ್’ ಎಂದು ನಾಮಾಂಕಿತವಾಯ್ತು ಮತ್ತು, ಇಂದು ಕಾರ್ಮಿಕ ವರ್ಗದವರಷ್ಟೇ ಅಲ್ಲದೆ, ಎಲ್ಲರೂ ಇಷ್ಟಡುವ ಬಟ್ಟೆಯಾಗಿ ಪ್ರಸಿದ್ಧವಾಗಿದೆ.

ಜೀನ್ಸ್ ಪ್ಯಾಂಟ್‌ಗಳಿಗೆ ಸಂಬಂಧಿಸಿ, ಅನೇಕ ಕೌತುಕದ ವಿಚಾರಗಳೂ ಇವೆ. ಜೇಕಬ್ ಡೇವಿಸ್ ಮತ್ತು ಲೆವಿ ಸ್ಟ್ರಾಸ್ ನಡುವಿನ ಒಪ್ಪಂದದ ದಿನವಾದ ಮೇ 20ನ್ನು ಜೀನ್ಸ್ ಪ್ಯಾಂಟುಗಳ ಹುಟ್ಟುಹಬ್ಬವೆಂದು ಆಚರಿಸಲಾಗುತ್ತದೆ. 217.7 ಕೆಜಿ ತೂಗುವ ಒಂದು ಹತ್ತಿ ಮೂಟೆಯಿಂದ ಸುಮಾರು 215ರಿಂದ 225 ಜೀನ್ಸ್ ಪ್ಯಾಂಟುಗಳನ್ನು ತಯಾರಿಸಬಹುದು. 1950ರಲ್ಲಿ ಜೀನ್ಸ್ ಪ್ಯಾಂಟುಗಳನ್ನು ಶಾಲಾ–ಕಾಲೇಜು, ಸಿನಿಮಾ ಥಿಯೇಟರ್ ಹಾಗೂ ರೆಸ್ಟುರಂಟ್‌ಗಳಂತಹ ಕೆಲ ಸ್ಥಳಗಳಲ್ಲಿ ತೊಡಬಾರದೆಂದು ತಡೆಹಿಡಿಯಲಾಗಿತ್ತು. ಮಾರುಕಟ್ಟೆಗೆ ಬಂದ ಕೆಲವೇ ವರ್ಷಗಳಲ್ಲಿ ವಿದೇಶಗಳಲ್ಲಿ ತುಂಬಾ ಹೆಸರುವಾಸಿಯಾದ ಜೀನ್ಸ್ ಪ್ಯಾಂಟ್ ಭಾರತಕ್ಕೂ ಕಾಲಿಟ್ಟಿತು ಮತ್ತು... ಇಂದು ಎಲ್ಲಾ ವರ್ಗದವರನ್ನೂ ಬಂಧಿಸಿಡುತ್ತಿದೆ.

– ಅಲೆಮಾರಿ.

# ಸಂಘಟನೆಯಲ್ಲಿ ಶಕ್ತಿ ಅಡಗಿದೆ: ಅಂಬರೀಶ ಹಿರೇಮಠ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಯಾವುದೇ ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಅದಕ್ಕೆ ತಕ್ಕ ಪ್ರತಿಫಲ ಇದ್ದೇ ಇರುತ್ತದೆ. ಕೇಬಲ್ ಆಪರೇಟರ್ ಉದ್ಯೋಗದಲ್ಲಿ ಸಾಕಷ್ಟು ಸಮಸ್ಯೆಗಳಿದ್ದರೂ, ಅದನ್ನು ಮುನ್ನಡೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ. ಸಂಘಟನೆ ಇದ್ದರೆ ಮಾತ್ರ ಶಕ್ತಿ ಇರುತ್ತದೆ ಎಂದು ವಕೀಲ ಅಂಬರೀಶ ಹಿರೇಮಠ ಹೇಳಿದರು.

ಸಮೀಪದ ನಿಡಗುಂದಿ ಗ್ರಾಮದ ಶರಣಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ರೋಣ/ಗಜೇಂದ್ರಗಡ ತಾಲೂಕಾ ಕೇಬಲ್ ಟಿವಿ ಆಪ್‌ರೇಟರ್ಸ್ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಂಡಿದ್ದ 23ನೇ ವರ್ಷದ ‘ಕೇಬಲ್ ಡೇ’ ದಿನಾಚರಣೆಯಲ್ಲಿ ಅವರು ಮಾತನಾಡಿದರು.



ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿ ಕೇಬಲ್ ಆಪರೇಟರ್‌ಗಳು ಜೀವನ ಸಾಗಿಸುವುದು ದುಸ್ತರ ಎನ್ನುವಂತಾಗಿದೆ. ಸರ್ಕಾರವು ಕೇಬಲ್ ಆಪರೇಟರ್ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯ ಮಾಡಬೇಕು. ಆ ಮೂಲಕ ಕೇಬಲ್ ಆಪರೇಟರ್, ಹಾಗೂ ಕೇಬಲ್ ಉದ್ಯಮವನ್ನು ಉಳಿಸುವ ಕಾರ್ಯವಾಗಬೇಕು ಎಂದರು.

ಜಿಲ್ಲಾಧ್ಯಕ್ಷ ಮಹಮ್ಮದಗೌಸ ತಾಂಬೋಟಿ ಮಾತನಾಡಿ, ಡಿಟಿಎಚ್ ಹಾವಳಿಯಿಂದಾಗಿ ಕೇಬಲ್ ಉದ್ಯಮಕ್ಕೆ ಸಾಕಷ್ಟು ಹಿನ್ನಡೆಯಾಗಿದೆ. ಕೇಬಲ್ ಉದ್ಯಮವನ್ನು ನೆಚ್ಚಿಕೊಂಡು ಜೀವನ ಸಾಗಿಸುವುದು ಅಸಾಧ್ಯ ಎಂಬ ಸ್ಥಿತಿಗೆ ಬಂದಿದೆ. ಸರ್ಕಾರಗಳು ಕೇಬಲ್ ಆಪರೇಟರ್‌ಗಳ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ಹರಿಸಬೇಕು ಎಂದರು.

ಗೌರವಾಧ್ಯಕ್ಷ ಎಂ.ಆರ್ ಬೂದಿಹಾಳ, ತಾಲೂಕಾಧ್ಯಕ್ಷ ಬಸವರಾಜ ಮುಧೋಳ ಅಧ್ಯಕ್ಷತೆ ವಹಿಸಿದ್ದರು.

ಉಪಾಧ್ಯಕ್ಷ ಮೌನೇಶ ಹೊಸಮನಿ, ಸಂತೋಷ ಮಂಗಳವಾಡೆ, ಈಶ್ವರ ತಿಪ್ಪರಡ್ಡಿ, ಅನಿಲ ತೆಂಬದಮನಿ, ಕಾಶಿನಾಥ ಮಿಸ್ಕಿನ್, ಶ್ರೀಶೈಲಪ್ಪ ಮಾರನಬಸರಿ, ರವಿಚಂದ್ರ ಹುಬ್ಬಳ್ಳಿ, ಮುತ್ತಣ್ಣ ನಲವಡೆ, ಬಸವರಾಜ ರಾಮನಕೊಪ್ಪ, ಬಸವರಾಜ ಅರಳಿ, ವೀರೇಶ ಬೊಮ್ಮಸಾಗರ, ಇಬ್ರಾಹಿಂ ಬುಕ್ಕಿಟಗಾರಮ, ಮಹಾಂತೇಶ ಹಿರೇಮ್ಯಾಗೇರಿ, ಪ್ರಭುಸ್ವಾಮಿ ವಿರಕ್ತಮಠ, ಶಂಭುಲಿಂಗ ಮಾವಿನಕಾಯಿ, ಶಿದ್ದಲಿಂಗಯ್ಯ ಚುರ್ಚಿಹಾಳಮಠ, ಕಳಕಪ್ಪ ಪಟ್ಟಣಶೆಟ್ಟಿ, ಚಂದ್ರಶೇಖರ ಕಳ್ಳಿಮಠ, ಸುರೇಶ ಸೋಂಪೂರ, ಅರುಣ ಕುಕನೂರ ಮುಂತಾದವರಿದ್ದರು. ರಮೇಶ ಗಡಾದ ನಿರ್ವಹಿಸಿದರು.

# ಮಗುವಿಗೆ ವಿಷಪ್ರಾಶನ ಮಾಡಿಸಿ ಹತ್ಯೆ ಮಾಡಿದ ಮಲತಾಯಿ!

■ ವಿಜಯಸಾಕ್ಷಿ ಸುದ್ದಿ, ಯಾದಗಿರಿ

ಮಗುವಿಗೆ ವಿಷ ಹಾಕಿ ಮಲತಾಯಿಯೋರ್ವಳು ಹತ್ಯೆ ಮಾಡಿರುವ ಘಟನೆ ಯಾದಗಿರಿ ಜಿಲ್ಲೆಯಲ್ಲಿ ವರದಿಯಾಗಿದೆ.

ಮಹಿಳೆ ಹಾಲಿನಲ್ಲಿ ಕ್ರಿಮಿನಾಶಕ ಬೆರೆಸಿ 5 ತಿಂಗಳ ಮಗುವಿಗೆ ಕುಡಿಸಿ ಹತ್ಯೆ ಮಾಡಿದ್ದಾಳೆ

ಬಬಲ ಗ್ರಾಮದಲ್ಲಿ ಆ.30 ರಂದು ಈ ಘಟನೆ ವರದಿಯಾಗಿದೆ. ಪೊಲೀಸ್ ಅಧಿಕಾರಿಗಳ ಮಾಹಿತಿಯ ಪ್ರಕಾರ, ಸಿದ್ಧಪ್ಪ ಎಂಬುವವರ ಮೊದಲ ಪತ್ನಿ ಶ್ರೀದೇವಿಗೆ ಮಕ್ಕಳಾಗಿರಲಿಲ್ಲ.

ಈ ಕಾರಣದಿಂದ ಆತ ದೇವಮ್ಮ ಎಂಬ ಮಹಿಳೆಯನ್ನು ವಿವಾಹವಾಗಿದ್ದ. ಈ ದಂಪತಿಗೆ 4 ಮಕ್ಕಳಿದ್ದರು. ಆದರೆ ಇತ್ತೀಚೆಗೆ ಶ್ರೀದೇವಿ ಸಹ ಹೆಣ್ಣುಮಗುವೊಂದಕ್ಕೆ ಜನ್ಮ ನೀಡಿದ್ದರು.

ಆ ಮಗುವಿಗೆ ಸಂಗೀತ ಎಂದು ನಾಮಕರಣ ಮಾಡಲಾಗಿತ್ತು.

**ಮೈಸೂರು:** ಆಸ್ತಿ ವಿಚಾರಕ್ಕೆ ಅಣ್ಣ–ಅತ್ತಿಗೆಯನ್ನು ಬರ್ಬರವಾಗಿ ಕೊಂದ ತಮ್ಮ!

ಆಸ್ತಿಯಲ್ಲಿ ಶ್ರೀದೇವಿ ಮಗುವಿಗೆ ಪಾಲು ಹೋಗುತ್ತದೆಂದು ಯೋಚಿಸಿದ ದೇವಮ್ಮ ಮಗುವಿಗೆ ಹಾಲಿನಲ್ಲಿ ಕ್ರಿಮಿನಾಶಕ ಹಾಕಿ ಸಾಯಿಸಿದ್ದಾಳೆ.

ವದಗೇರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ದೇವಮ್ಮ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

# ಕದಳಿಶ್ರೀ ವೇದಿಕೆಯಿಂದ ಅಮೃತ ಭೋಜನ–ಜ್ಞಾನ ಸಿಂಚನ



■ ವಿಜಯಸಾಕ್ಷಿ ಸುದ್ದಿ, ಗದಗ

ಬಸವಾದಿ ಶರಣರ ಪ್ರೋತ್ಸಾಹದಿಂದ ಶರಣೆಯರು ವಚನ ರಚನೆ ಮಾಡುವ ಮೂಲಕ ವಚನ ಸಾಹಿತ್ಯಕ್ಕೆ ವಿಶಿಷ್ಠ ಕೊಡುಗೆ ನೀಡಿದ ಅಕ್ಕಮಹಾದೇವಿ ಶ್ರೇಷ್ಠ ವಚನಗಾರ್ತಿ ಎಂದು ಚಿಂತಕಿ ಸುಜಾತಾ ಗುಡಿಮನಿ ಹೇಳಿದರು.

ಅವರು ಬುಧವಾರ ಗದಗ ಜಿಲ್ಲಾ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆಯಿಂದ ಗದುಗಿನ ರಾಜೀವಗಾಂಧಿ ನಗರದ ಸ.ಕ.ಗಂ.ಮ ಶಾಲೆ ನಂ.8ರಲ್ಲಿ ನಡೆದ ಅಮೃತ ಭೋಜನ–ಜ್ಞಾನ ಸಿಂಚನ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಿಸಿ ಮಾತನಾಡಿದರು.

ಮಕ್ಕಳು ವಚನಕಾರರ ವಚನಗಳನ್ನು ಓದಿ ತಿಳಿದುಕೊಳ್ಳಬೇಕು. ಅವು ನಮಗೆ ಉತ್ತಮ ಮಾರ್ಗದರ್ಶನ ನೀಡುತ್ತವೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಲಲಿತಾ ಉಮನಾಬಾದಿ, ಶರಣರ ವಚನ ಪ್ರಸಾರದ ಘನ ಉದ್ದೇಶದಿಂದ ಶ್ರಾವಣ ಮಾಸದಾದ್ಯಂತ ಶಾಲೆಗಳಲ್ಲಿ ಈ ಕಾರ್ಯಕ್ರಮ ದಾನಿಗಳ ಸಹಕಾರದಿಂದ ನಡೆದು ಬರುತ್ತಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯೋಪಾಧ್ಯಾಯ ಎಂ.ಎಲ್ ಹೊಸಳ್ಳಿ ಮಾತನಾಡಿ, ಸಮುದಾಯ ಸಂಘಟನೆಗಳು ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಕಲಿಕೆಗೆ ಸ್ಫೂರ್ತಿಯಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಮಕ್ಕಳಿಗೆ ಸಿಹಿ ಭೋಜನ ವಿತರಿಸಿ, ಕಲಿಕಾ ಸಾಮಗ್ರಿಗಳನ್ನು, ಉತ್ತಮ ಪುಸ್ತಕಗಳನ್ನು ನೀಡುತ್ತಿರುವದು ಹೆಮ್ಮೆಯ ಸಂಗತಿ ಎಂದರು.

ವೇದಿಕೆಯ ಮೇಲೆ ವಿದ್ಯಾ ಹುಲಬನ್ನಿ, ಮಂಜುಳಾ ತಂಗೂಡಿ ಉಪಸ್ಥಿತರಿದ್ದರು. ಕವಿತಾ ದಂಡಿನ ಸ್ವಾಗತಿಸಿದರು. ಎಂ.ವ್ಹಿ ರಾಮಣ್ಣವರ ಪರಿಚಯಿಸಿದರು. ಜಿ.ಎಂ ವಸ್ತ್ರದ ನಿರೂಪಿಸಿದರು. ರೂಪಾ ರಾಜೋಳಿ ವಂದಿಸಿದರು.

# ಕನ್ನಡಮ್ಮನ ಘನತೆ ಹೆಚ್ಚಿಸಲು ಶ್ರಮಿಸೋಣ

■ ವಿಜಯಸಾಕ್ಷಿ ಸುದ್ದಿ, ಮೈಸೂರು

ಕುಕನೂರಿನ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಹಾಗೂ ಮೈಸೂರಿನ ಚಿತ್ಕಲಾ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದಲ್ಲಿ ಸೆ.10ರಂದು ಮೈಸೂರಿನ ಕುತ್ತೇತ್ತೂರ್ ಸೀತಾರಾಂ ರಾವ್ ಭವನದಲ್ಲಿ ನಡೆಯಲಿರುವ ಅಖಿಲ ಕರ್ನಾಟಕ ಸಾಂಸ್ಕೃತಿಕ ಸಮ್ಮೇಳನ ಹಾಗೂ ಸಾಹಿತ್ಯೋತ್ಸವ ಸಮಾರಂಭದ ಕರಪತ್ರವನ್ನು ಇತ್ತೀಚೆಗೆ ಮೈಸೂರಿನಲ್ಲಿ ಬಿಡುಗಡೆಗೊಳಿಸಲಾಯಿತು.

ಗೋವಾ ಕನ್ನಡಿಗರು ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಡಾ. ಕಾಶಿನಾಥ ಹಿರೇಮಠ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿ, ಕನ್ನಡ ನಾಡು, ನುಡಿ, ಪರಂಪರೆಯ ಸೇವೆಗೆ ಎಷ್ಟು ದುಡಿದರೂ ಕಡಿಮೆಯೇ. ಕನ್ನಡಿಗರಾದ ನಾವು ಪ್ರತಿದಿನವೂ ಕನ್ನಡಮ್ಮನ ಘನತೆ ಹೆಚ್ಚಿಸಲು ನಿರಂತರ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಕನ್ನಡದ ಅಸ್ಮಿತೆ ಹೆಚ್ಚಿಸೋಣ. ಮೈಸೂರಿನಲ್ಲಿ ನಡೆಯಲಿರುವ ಸಾಹಿತ್ಯೋತ್ಸವ ಹಾಗೂ ಸಾಂಸ್ಕೃತಿಕ ಮೇಳವು ಹಲವಾರು ಪ್ರತಿಭೆಗಳ ಬೆಳವಣಿಗೆಗೆ ಸಹಾಯಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಹಿರಿಯ ಸಾಹಿತಿ ಕುಮಾರ್ ಮಂಡ್ಯ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್‌ನ ಅಧ್ಯಕ್ಷ, ಪತ್ರಕರ್ತ ರುದ್ರಪ್ಪ ಭಂಡಾರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.ಸಾಹಿತಿ ಕ.ಬ ವೀರಣ್ಣ ಕಣಗಾಲ, ಚಿತ್ಕಲಾ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷೆ ರೂಪಾ ಹಿರೇಮಠ, ಧಾರವಾಡದ ಸಾಹಿತಿ, ಪತ್ರಕರ್ತ ಎಚ್.ಆರ್ ವಸ್ತ್ರದ, ಚಿತ್ಕಲಾ ಸಾಂಸ್ಕೃತಿಕ ತಂಡದ ದೀಪಶ್ರೀ, ಸಿ.ಎನ್ ಭಾಗ್ಯಲಕ್ಷ್ಮೀ, ಶಕುಂತಲಾ ಸವಿ, ಜ್ಯೋತಿ ಬೆಟ್ಟಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಪಾಲಕರ ಸಭೆ, ಶಾಲಾ ಗ್ರಾಹಕರ ಕ್ಲಬ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಕ್ಬರ್‌ಸಾಬ ಬಬರ್ಚಿ ಅಭಿಮತ

# ಮನಸ್ಸಿಟ್ಟು ಓದಿದರೆ ಯಶಸ್ಸು ಸಾಧ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳ ಆಸಕ್ತಿದಾಯಕ ಕಲಿಕೆಯು ಯಶಸ್ಸನ್ನು ತಂದು–ಕೊಡುತ್ತದೆ. ಮನಸ್ಸಿಟ್ಟು ಓದಿದರೆ ಯಶಸ್ಸು ಸಾಧ್ಯ. ಇಷ್ಟಪಟ್ಟು ಓದಿ, ಕಷ್ಟಪಟ್ಟು ಪದವಿ ಗಳಿಸಬೇಕೆಂದು ಎಸ್‌ಡಿಎಂಸಿ ಅಧ್ಯಕ್ಷ ಅಕ್ಬರ್‌ಸಾಬ ಬಬರ್ಚಿ ಹೇಳಿದರು.

ಅವರು ಗುರುವಾರ ನಗರದ ಸರಕಾರಿ ಉರ್ದು ಪ್ರೌಢಶಾಲೆಯಲ್ಲಿ ಜರುಗಿದ ಪಾಲಕರ ಸಭೆ, ಶಾಲಾ ಗ್ರಾಹಕರ ಕ್ಲಬ್ ಉದ್ಘಾಟನೆ ಹಾಗೂ ಗದಗ ಜಿಲ್ಲಾ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆಯಿಂದ ಜರುಗಿದ ಅಮೃತ ಭೋಜನ–ಜ್ಞಾನಸಿಂಚನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಾಲಕರು ಮಕ್ಕಳಿಗೆ ವಿದ್ಯಾರ್ಜನೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಬೇಕು. ಪರೀಕ್ಷೆಯ ಸಮಯದಲ್ಲಿ ಮಕ್ಕಳ ಬಗೆಗೆ ಕಾಳಜಿ ವಹಿಸಿ, ಉತ್ತಮ ಅಂಕ ಪಡೆಯುವಂತೆ ಪ್ರೇರಣೆ ನೀಡಬೇಕೆಂದರು.



ಎಸ್‌ಡಿಎಂಸಿ ಉಪಾಧ್ಯಕ್ಷ ಅಬೂಬಕರ ಅಣ್ಣಿಗೇರಿ ಮಾತನಾಡಿ, ವಿದ್ಯಾರ್ಥಿ ಜೀವನ ಮಹತ್ವದ ಘಟ್ಟ. ಓದಿನೊಂದಿಗೆ ಶಿಸ್ತು ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸುವುದು ಅವಶ್ಯ. ಮಕ್ಕಳು ಸಮಯದ ಸದುಪಯೋಗ ಮಾಡಿಕೊಂಡು ಯಶಸ್ಸು ಸಾಧಿಸಬೇಕೆಂದರು.

ಶಾಲಾ ಮುಖ್ಯೋಪಾಧ್ಯಾಯ ಎಚ್.ಎ ಫಾರೂಕಿ ಮಾತನಾಡಿ, ಪಾಲಕರು ಶಾಲೆಗೆ ಆಗಾಗ ಭೇಟಿ ನೀಡಿ ಸಲಹೆ–ಸೂಚನೆಗಳನ್ನು ನೀಡಬೇಕು. ಸಂಘ–ಸಂಸ್ಥೆಗಳು ಸರಕಾರಿ ಶಾಲೆಗಳಿಗೆ ಆಗಮಿಸಿ ಕಾರ್ಯಕ್ರಮಗಳನ್ನು ನೆರವೇರಿಸುವದರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದರು. ವೇದಿಕೆಯಲ್ಲಿ ಡಯಟ್‌ನ ಹಿರಿಯ ಉಪನ್ಯಾಸಕ ರಘುವೀರ, ಸಂಪನ್ಮೂಲ ವ್ಯಕ್ತಿ ಕೆ.ಎಸ್ ಬೇಲೇರಿ ಉಪಸ್ಥಿತರಿದ್ದರು.

ಶಾಲಾ ಗ್ರಾಹಕರ ಕ್ಲಬ್ ಉದ್ಘಾಟಿಸಿ ಮಾತನಾಡಿದ ಚಿಂತಕಿ ಸುಶೀಲಾ ಕೋಟಿ, ವಿದ್ಯಾರ್ಥಿಗಳು ಸರಿಯಾದ ಕ್ರಮದಲ್ಲಿ ಊಟ ಮಾಡದೆ, ನೀರು ಕುಡಿಯದೆ ಅಪೌಷ್ಠಿಕತೆಗೆ ಒಳಗಾಗುತ್ತಿದ್ದಾರೆ. ಪಾಲಕರು ಮಕ್ಕಳಿಗೆ ನೀರು ಹಾಗೂ ಊಟದ ಕ್ರಮದ ಬಗ್ಗೆ ಕಾಳಜಿ ವಹಿಸಬೇಕು. ಅಕ್ಕಮಹಾದೇವಿ ಕದಳಿಶ್ರೀ ವೇದಿಕೆಯಿಂದ ಪ್ರತಿ ಶ್ರಾವಣ ಮಾಸದಲ್ಲಿ ಶಾಲೆಗಳಲ್ಲಿ ನಡೆಸಲಾಗುವ ಅಮೃತ ಭೋಜನ–ಜ್ಞಾನ ಸಿಂಚನ ಕಾರ್ಯಕ್ರಮ ಮಕ್ಕಳಿಗೆ ಹೊಸ ಚೈತನ್ಯ ನೀಡಿದೆ. ಸಿಹಿ ಭೋಜನದೊಂದಿಗೆ ಶಾಲೆಗಳಿಗೆ ಊಟದ ತಟ್ಟೆ, ಲೋಟ, ಕಲಿಕಾ ಸಾಮಗ್ರಿಗಳನ್ನು, ಗ್ರಂಥಾಲಯಕ್ಕೆ ಪುಸ್ತಕಗಳನ್ನು ನೀಡಲಾಗುತ್ತಿದೆ ಎಂದರು.

ಸುಶೀಲಾ ಕೋಟಿ ಅವರನ್ನು ಶಾಲೆಯ ವತಿಯಿಂದ ಸನ್ಮಾನಿಸಲಾಯಿತು. ವಿವಿಧ ಪರೀಕ್ಷೆಗಳಲ್ಲಿ, ಆಟ–ಪಾಠಗಳಲ್ಲಿ ಪ್ರಗತಿ ಸಾಧಿಸಿದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಅಲಿಯಾ ಬಬರ್ಚಿ, ಮದಿಹಾ ಶಿರಹಟ್ಟಿ, ಆತಿಕಾ ಮಕಾನದಾರ ಪ್ರಾರ್ಥಿಸಿದರು. ಡಾ. ಎಂ.ಎಸ್ ಮಕಾನದಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಕಾಂತ ಬಡ್ಡೂರ ಸ್ವಾಗತಿಸಿದರು. ಎಂ.ಎಂ ಶಿವಳ್ಳಿ ಪರಿಚಯಿಸಿದರು. ಸಾಧಿಯಂ ಬರ್ಜಿಸ್ ನಿರ್ವಹಿಸಿದರು. ಎಂ.ಎಂ ಮಕಾನದಾರ ನಿರೂಪಿಸಿದರು, ಕೆ.ಎಸ್ ಕೊಪ್ಪಳ ವಂದಿಸಿದರು.

ಎಸ್.ಎಸ್ ಸರಖವಾಸ, ಎಂ.ವೈ ಹಣಗಿ, ಎನ್.ಎಸ್ ಮಕಾನದಾರ, ಎನ್.ಬಿ ಕರ್ಲವಾಡ, ಡಬ್ಲ್ಯೂ.ಎ ಶಿರಹಟ್ಟಿ, ಎಸ್.ಎ ಕುಂಬಾರ, ಕಿರಣ್‌ಕುಮಾರ ರಾಮಜೀ, ರಾಜೇಶ್ವರಿ ಬಂಡಾರಿ, ಎಸ್‌ಡಿಎಂಸಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಕಾವೇರಿ ವಿವಾದ: ತಮಿಳು ನಾಡು ಅರ್ಜಿ ವಿಚಾರಣೆ ಸೆ.6ಕ್ಕೆ ಮುಂದೂಡಿದ ಸುಪ್ರೀಂ ಕೋರ್ಟ್

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಕರ್ನಾಟಕ ಮತ್ತು ತಮಿಳು ನಾಡಿನ ಮಧ್ಯೆ ಕಾವೇರಿ ಜಲ ವಿವಾದ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 6ಕ್ಕೆ ಮುಂದೂಡಿದೆ.

ಕರ್ನಾಟಕ ಸರ್ಕಾರ 24 ಸಾವಿರ ಕ್ಯೂಸೆಕ್ಸ್ ಕಾವೇರಿ ನೀರು ಬಿಡುಗಡೆ ಮಾಡಬೇಕೆಂದು ಆದೇಶ ನೀಡಬೇಕೆಂದು ಕೋರಿ ತಮಿಳು ನಾಡು ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಹಾಕಿದ್ದು, ಇಂದು ವಿಚಾರಣೆ ನಡೆಸಬೇಕಾಗಿತ್ತು. ಆದರೆ ಇಂದು ಸುಪ್ರೀಂ ಕೋರ್ಟ್ ವಿಚಾರಣೆಯನ್ನು ಸೆಪ್ಟೆಂಬರ್ 6ಕ್ಕೆ ಮುಂದೂಡಿದೆ.

ತಮಿಳುನಾಡಿಗೆ ನೀರು ಬಿಡಬೇಕು ಎಂಬ ಕಾವೇರಿ ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ಕರ್ನಾಟಕ ಸರ್ಕಾರ ಕೂಡ ಪ್ರಶ್ನಿಸಲಿದೆ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದು, ಅಣೆಕಟ್ಟುಗಳಿಗೆ ಸಮಿತಿ ಸದಸ್ಯರ ಆಹ್ವಾನಿಸಿ ವಾಸ್ತವಾಂಶ ತಿಳಿಯುವಂತೆ ಮನವಿ ಮಾಡುತ್ತೇವೆ ಎಂದು ಹೇಳಿದ್ದಾರೆ.

ಕರ್ನಾಟಕ 24,000 ಕ್ಯೂಸೆಕ್ ನೀರು ಬಿಡುವಂತೆ ತಮಿಳುನಾಡು ಮಾಡಿರುವ ಮನವಿ ಇಂದು ಸುಪ್ರೀಂ ಕೋರ್ಟ್‌ನಲ್ಲಿ ತ್ರಿಸದಸ್ಯ ಪೀಠದ ಮುಂದೆ ವಿಚಾರಣೆಗೆ ಬರಬೇಕಾಗಿತ್ತು.


## ನೀವೂ ನಮ್ಮ ಜೊತೆ ಕೈಜೋಡಿಸಿ

‘ವಿಜಯಸಾಕ್ಷಿ’

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಸಕ್ತ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ತರಬೇತಿಗಾಗಿ ಆಯ್ಕೆ ಮಾಡಬೇಕಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಿಗೆ ಸೆಪ್ಟಂಬರ್ 11 ರಂದು ಸಾಯಂಕಾಲ 05 ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಹತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಗದಗ

# ವಸತಿ ನಿಲಯಕ್ಕಾಗಿ ಬಾಡಿಗೆ ಕಟ್ಟಡ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಸಕ್ತ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾತಿ ಸಂಖ್ಯೆಗಿಂತಲೂ ಹೆಚ್ಚಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಪ್ರವೇಶ ಕೋರಿ ಬಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ನೀಡಬೇಕಾಗಿರುವುದರಿಂದ 150 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಇರುವ ಪ್ರತ್ಯೇಕ ಕೊಠಡಿಗಳನ್ನು, ಶೌಚಾಲಯ, ಸ್ನಾನಗೃಹ, ವಿಶಾಲವಾದ ಅಡುಗೆ ಮನೆ, ವಿದ್ಯುತ್ ಸೌಲಭ್ಯ, ಬೋರವೆಲ್ ಹೊಂದಿರುವ ಸುಸಜ್ಜಿತ ಕಟ್ಟಡಗಳ ಅವಶ್ಯಕತೆ ಇದ್ದು, ಕಟ್ಟಡವನ್ನು ಬಾಡಿಗೆ ರೂಪದಲ್ಲಿ ಕೊಡಲು ಬಯಸುವ ಕಟ್ಟಡ ಮಾಲೀಕರು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಗದಗ ಇವರನ್ನು ಅಥವಾ ಕಚೇರಿ ದೂರವಾಣಿ ಸಂಖ್ಯೆ:08372-297258, ಮೊಬೈಲ್ ಸಂಖ್ಯೆ:9480843128 ಸಂಖ್ಯೆಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

# ಸೆ. 10ರವರೆಗೆ ಪಡಿತರ ಕಾರ್ಡ್ ತಿದ್ದುಪಡಿಗೆ ಅವಕಾಶ

■ವಿಜಯಸಾಕ್ಷಿ ಸುದ್ದಿ, ಗದಗ

ಪಡಿತರ ಚೀಟಿಯಲ್ಲಿ ತಿದ್ದುಪಡಿ ಹಾಗೂ ಫಲಾನುಭವಿಗಳ ಹೆಸರನ್ನು ಸೇರ್ಪಡೆ ಮಾಡಲು ಸೆ. 1 ರಿಂದ ಸೆ. 10 ರವರೆಗೆ ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ ಅರ್ಜಿ ಸಲ್ಲಿಸಲು ಸರ್ಕಾರವು ಅವಕಾಶ ಕಲ್ಪಿಸಿದೆ.

ಜಿಲ್ಲೆಯ ಪಡಿತರ ಚೀಟಿಯಲ್ಲಿನ ಫಲಾನುಭವಿಗಳು ಮಾಹಿತಿಯ ತಿದ್ದುಪಡಿ ಹಾಗೂ ಹೆಚ್ಚುವರಿ ಫಲಾನುಭವಿಗಳ ಹೆಸರನ್ನು ಪಡಿತರ ಚೀಟಿಯಲ್ಲಿ ಸೇರ್ಪಡೆ ಮಾಡಲು https://ahara.kar.nic.in ವೆಬ್ ಸೈಟ್ ನಲ್ಲಿ ಅವಕಾಶ ಇರುತ್ತದೆ. ಪಡಿತರ ಚೀಟಿದಾರರು ಜಿಲ್ಲೆಯಲ್ಲಿಯ ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ನಾಗರಿಕ ಸೇವಾ ಕೇಂದ್ರಗಳ ಮತ್ತು ಸೈಬರ್ ಸೆಂಟರಗಳಲ್ಲಿ ಪಡಿತರ ಚೀಟಿ ತಿದ್ದುಪಡಿ ಮತ್ತು ಸೇರ್ಪಡೆಗೆ ಆನಲೈನ್ ಮುಖಾಂತರ ಸಕಾಲದಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ ಎಂದು ಆಹಾರ, ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ, ಸೆ.3 ರಂದು ಬೆಳಿಗ್ಗೆ 6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಶ್ರೀಶೈಲ್ ಪೂಜಾರಿಯವರಿಂದ ಹಿಂದೂಸ್ಥಾನಿ ಸಂಗೀತ" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಕು.ಪುಟ್ಟರಾಜ ಕಿರೇಸೂರು ಇವರಿಂದ "ಸುಗಮ ಸಂಗೀತ" ಸಾಯಂಕಾಲ: 5.30 ರಿಂದ 6.30 ಗಂಟೆಯವರೆಗೆ ಭೀಷ್ಮ ಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಶ್ರೀಮತಿ ಶಕುಂತಲಾ ಹಾಳಕೇರಿ ಇವರಿಂದ "ಜಾನಪದ ಸಂಗೀತ" ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾರಿಗೆ ಬಸ್ ಪಲ್ಟಿ: ತಪ್ಪಿದ ಅನಾಹುತ

▶▶ಮೊದಲನೇ ಪುಟದಿಂದ

ಚಲಾಯಿಸಿದ್ದಾನೆ. ಇಲದೆಯಿದ್ದರೆ 20ರಿಂದ 30 ಅಡಿ ಹಿಂದಕ್ಕೆ ಬಸ್ ಪಲ್ಟಿಯಾಗಿದ್ದರೆ ಭಾರೀ ಅನಾಹುತವೇ ಸಂಭವಿಸುತ್ತಿತ್ತು ಎಂದು ಪಕ್ಕದ ಜಮೀನಿನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೂಲಿ ಕಾರ್ಮಿಕರು ಮಾಹಿತಿ ನೀಡಿದರು.

ಚಾಲಕನಿಗೆ ಸ್ವಲ್ಪ ಗಾಯವಾಗಿದ್ದು, ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಘಟಕದ ಅಧಿಕಾರಿ ಕೆ.ಎಸ್ ಪಲ್ಲೇದ ತಿಳಿಸಿದ್ದಾರೆ. ಈ ಕುರಿತು ನರೇಗಲ್ಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಿ.ಪಂ ಉಪ ಕಾರ್ಯದರ್ಶಿ ಸಿ.ಆರ್ ಮುಂಡರಗಿ ಮಾಹಿತಿ

# ಕಾಮಗಾರಿ, ಕೂಲಿ ಕೆಲಸ ಬೇಡಿಕೆ ಸ್ವೀಕಾರ ಅಭಿಯಾನ





■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಲ್ಲಿ ನರೇಗಾ ಯೋಜನೆಯಡಿ ಉದ್ಯೋಗ ಅರಸಿ ಜಿಲ್ಲೆಯ ಜನರು ಬೇರೊಂದು ಪ್ರದೇಶಕ್ಕೆ ವಲಸೆ ಹೋಗುವುದನ್ನು ತಡೆಯುವ ಹಾಗೂ ವೈಯಕ್ತಿಕ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯಿತಿ ವತಿಯಿಂದ ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಯಾದ ಮಹಾತ್ಮಗಾಂಧಿ ನರೇಗಾದಡಿ ಜಿಲ್ಲೆಯಲ್ಲಿ ಮನೆ ಮನೆಗೆ ತೆರಳಿ, ವೈಯಕ್ತಿಕ ಕಾಮಗಾರಿ ಮತ್ತು ಕೂಲಿ ಕೆಲಸ ಬೇಡಿಕೆ ಸ್ವೀಕರಿಸುವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿ.ಪಂ ಉಪ ಕಾರ್ಯದರ್ಶಿ ಸಿ.ಆರ್ ಮುಂಡರಗಿ ತಿಳಿಸಿದ್ದಾರೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೋಂದಾಯಿತ ಗ್ರಾಮೀಣ ಕುಟುಂಬದ ಸದಸ್ಯರಿಗೆ ಪ್ರತಿ ವರ್ಷ 100 ದಿನಗಳ ಉದ್ಯೋಗ ಒದಗಿಸಲಾಗುತ್ತದೆ. ಈ ಯೋಜನೆಯಡಿ ಜನರು ನಗರ ಪ್ರದೇಶಗಳಿಗೆ ವಲಸೆ ಹೋಗದಂತೆ ತಡೆಗಟ್ಟಲು ಹಾಗೂ ಜನರಿಗೆ ತಮ್ಮ ಸ್ವಗ್ರಾಮದಲ್ಲಿಯೇ ಉದ್ಯೋಗ ಒದಗಿಸಿ ಆರ್ಥಿಕವಾಗಿ ಸಬಲರಾಗಲು, ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಆಸ್ತಿ ಸೃಜನೆ ಮಾಡುವ ಉದ್ದೇಶದಿಂದ ಸ್ಥಳೀಯವಾಗಿ ಉದ್ಯೋಗ ನೀಡಿ, ಗಂಡು-ಹೆಣ್ಣು ಎಂಬ ಬೇಧವಿಲ್ಲದೆ ಸಮಾನವಾಗಿ ಪ್ರತಿ ದಿನಕ್ಕೆ 316 ರೂ. ಕೂಲಿ ನೀಡಲಾಗುತ್ತಿದೆ.

ಜಿಲ್ಲೆಯ ಏಳು ತಾಲೂಕುಗಳಲ್ಲಿನ ಗ್ರಾಮಗಳಲ್ಲಿ ನೋಂದಾಯಿತ ಕುಟುಂಬಗಳ ಮನೆ ಮನೆಗೆ ತೆರಳಿ ಕೂಲಿಕಾರರಿಗೆ ಹಾಗೂ ರೈತರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕೆಲಸ ಮತ್ತು ವೈಯಕ್ತಿಕ ಕೆಲಸಗಳನ್ನು ನೀಡುವ ಕುರಿತು ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ.

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಮಳೆಯ ಕಣ್ಣಾಮುಚ್ಚಾಲೆ ಆಟದಿಂದ ಗ್ರಾಮೀಣ ರೈತರು ಸ್ಥಳೀಯವಾಗಿ ಉದ್ಯೋಗ ಖಾತ್ರಿ ಯೋಜನೆಡಿ ಕೆಲಸ ನೀಡಲು ಮನೆ ಮನೆಗೆ ತೆರಳಿ ಜನರ ಉದ್ಯೋಗ ಬೇಡಿಕೆ ಪತ್ರವನ್ನು ಸ್ವೀಕರಿಸಿದ್ದರಿಂದ ಆಯುಕ್ತಾಲಯದ ಗುರಿಗೆ ನರೇಗಾದಡಿ ಶೇ.100ರಷ್ಟು ಹೆಚ್ಚು ಪ್ರಗತಿ ಸಾಧಿಸಲು ಸಾಧ್ಯವಾಗಿದ್ದು, ಇನ್ನೂ ಮುಂದೆಯೂ ಸಹ ಹೆಚ್ಚಿನ ಪ್ರಗತಿ ಸಾಧಿಸಲು ಯೋಜನೆಯಡಿ ಜಿಲ್ಲೆಯಲ್ಲಿ ಮನೆ ಮನೆಗೆ ತೆರಳಿ ಕಾಮಗಾರಿ ಅಥವಾ ಕೂಲಿ ಕೆಲಸ ಬೇಡಿಕೆ ಸ್ವೀಕರಿಸುವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

# 'ಪಂಚಾಯತರಾಜ್ ವ್ಯವಸ್ಥೆಯಲ್ಲಿ ಅಗಾಧ ಶಕ್ತಿಯಿದೆ'

▶▶ಮೊದಲನೇ ಪುಟದಿಂದ

ಪ್ರಯತ್ನ ಪಟ್ಟವರಲ್ಲಿ ಮಾಜಿ ಪ್ರಧಾನಿ ರಾಜೀವ ಗಾಂಧಿ ಪ್ರಮುಖರು. ನಂತರ, ಪ್ರಧಾನಿಗಳಾದ ನರಸಿಂಹರಾವ್ ಅವರ ಅವಧಿಯಲ್ಲಿ 73ನೇ ತಿದ್ದುಪಡಿ ತರಲಾಯಿತು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮೀಸಲಾತಿ ಜಾರಿಗೊಳಿಸಿದ ಪ.ಜಾ ಹಾಗೂ ಪ.ಪಂಗಡದ ಮಹಿಳೆಯರಿಗೂ ಗ್ರಾಮ ಪಂಚಾಯಿತಿಯ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ರಾಷ್ಟ್ರಕ್ಕೆ ಹೋಲಿಸಿದರೆ ರಾಜ್ಯದಲ್ಲಿನ ಪಂಚಾಯಿತಿಗಳು ಉತ್ತಮ ಸ್ಥಿತಿಯಲ್ಲಿವೆ. ಪರಿಶಿಷ್ಟರನ್ನು, ಹಿಂದುಳಿದ, ಬಡವರ ಹಾಗೂ ಮಹಿಳೆಯರನ್ನು ಅಧ್ಯಕ್ಷರನ್ನಾಗಿಸಲಾಗಿದೆ. ಮಹಿಳೆಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ವತಂತ್ರ್ಯ ನೀಡುವಂತೆ ಬಸವಣ್ಣನವರು ಹೇಳಿದ್ದರೂ ಕೂಡ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಗೆ ಯಾವುದೇ ಸ್ಥಾನಮಾನ ನೀಡಿರಲಿಲ್ಲ. ಆದರೆ 73ನೇ ಕಾನೂನು ತಿದ್ದುಪಡಿಯ ಮೂಲಕ ಮಹಿಳೆಯರಿಗೆ ಎಲ್ಲ ಸ್ಥಾನಮಾನಗಳನ್ನು ನೀಡಲಾಯಿತು. ಈ ತಿದ್ದುಪಡಿ ಕಾನೂನು ಅನುಷ್ಠಾನದಲ್ಲಿ ರಾಜ್ಯವು ಮುಂಚೂಣಿಯಲ್ಲಿತ್ತು.

ಭಾರತೀಯ ಸಾರ್ವಜನಿಕ ಸಂಸ್ಥೆಯ ಅಧ್ಯಕ್ಷರು ಹಾಗೂ ರಾಜ್ಯ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಟಿ.ಎಂ ವಿಜಯಭಾಸ್ಕರ ಮಾತನಾಡಿ, ಈ ವಿಶ್ವವಿದ್ಯಾಲಯ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಯ ಧ್ಯೇಯದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಪಂಚಾಯತ ರಾಜ್ ವ್ಯವಸ್ಥೆಗೆ ತಿದ್ದುಪಡಿ ತರುವ ಮೂಲಕ ಪಂಚಾಯತ ರಾಜ್ ವ್ಯವಸ್ಥೆಯನ್ನು ಬಲಪಡಿಸಲಾಗಿದೆ. ವಾರ್ಡ್ ಸಭೆಗಳ ಸಬಲೀಕರಣ, ಭಾಗೀದಾರರ ಸಮಿತಿಗಳ ಸಬಲೀಕರಣ, ಆಡಳಿತ ವಿಕೇಂದ್ರೀಕರಣ ಅತೀ ಅವಶ್ಯಕವಾಗಿದೆ ಎಂದರಲ್ಲದೆ, ಪಂಚಾಯಿತಿಗಳಲ್ಲಿ ಆಡಳಿತ ವಿಕೇಂದ್ರೀಕರಣದ ಕಾರ್ಯವಾಗಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪಂಚಾಯತ ರಾಜ್ ಕಮಿಷನರೇಟ್ ನಿರ್ದೇಶಕಾರದ ಏಕಾಂತಪ್ಪ ಮಾತನಾಡಿ, ಪಂಚಾಯತ ರಾಜ್ ಕಾನೂನುಗಳಿಗೆ ತಿದ್ದುಪಡಿ ತರುವ ಮೂಲಕ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಬಲ ತುಂಬಲಾಗಿದೆ. ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳನ್ನು ನಿಯಂತ್ರಿಸುವ ಕಾರ್ಯವಾಗಬೇಕು. ಕಾನೂನು ತಿದ್ದುಪಡಿ ತರುವ ಮೂಲಕ ಗ್ರಾಮಗಳ ಅಭಿವೃದ್ಧಿಗಾಗಿ ಜನರ ಸಹಭಾಗಿತ್ವವಾಗತೊಡಗಿತು. ಪಂಚತಂತ್ರ ಕಾರ್ಯವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಗ್ರಾಮೀಣ ಜನರನ್ನು ಗೌರವಯುತ ಸ್ಥಾನಕ್ಕೆ ಕೊಂಡೊಯ್ಯಲು ಸಹಕಾರಿಯಾಗುತ್ತಿದೆ ಎಂದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ಮಾತನಾಡಿ, ಗ್ರಾಮ ಸ್ವರಾಜ್ ಕಲ್ಪನೆ ಸಾಕಾರಕ್ಕೆ ವಿಶ್ವವಿದ್ಯಾಲಯ ಸಂಪೂರ್ಣ ಕಾರ್ಯಬದ್ಧವಾಗಿದೆ ಎಂಬ ವಿಶ್ವಾಸ ನಮ್ಮದು ಎಂದರು. ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಮಾಜಿ ಪ್ರಧಾನ ಕಾರ್ಯದರ್ಶಿ ಡಾ. ಎಸ್.ಎಸ್ ಮೀನಾಕ್ಷಿ ಸುಂದರಂ ಸೇರಿದಂತೆ ವಿಷಯ ತಜ್ಞರು, ಸಂಶೋಧನಾ ವಿದ್ಯಾರ್ಥಿಗಳು, ಗಣ್ಯರು ಉಪಸ್ಥಿತರಿದ್ದರು. ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಬಸವರಾಜ ಲಕ್ಕಣ್ಣವರ ಅತಿಥಿಗಳನ್ನು ಸ್ವಾಗತಿಸಿದರು.

# ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಪೂರೈಕೆಗೆ ಆದ್ಯತೆ ನೀಡಿ

▶▶ಮೊದಲನೇ ಪುಟದಿಂದ

ತ್ಯಾಗಮಯಿ, ತಾಯಿಯ ಪ್ರೀತಿಯ ಧೋರಣೆಯೊಂದಿಗೆ ಬಿಸಿಯೂಟವನ್ನು ತಯಾರಿಸಿ ತಾಯಿಯು ಮಕ್ಕಳಿಗೆ ಯಾವ ರೀತಿಯಿಂದ ಊಟವನ್ನು ನೀಡುತ್ತಾಳೋ ಅದೇ ರೀತಿ ಶಾಲಾ ಮಕ್ಕಳಿಗೆ ನೀಡುವಲ್ಲಿ ಕ್ರಮ ವಹಿಸುವಂತೆ ಎಲ್ಲ ಅಡುಗೆದಾರರಿಗೆ ಮಾರ್ಗದರ್ಶನ ನೀಡಿದರು. ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಎಸ್ ಡಿ ಕನವಳ್ಳಿ ಮಾತನಾಡಿ, ಈ ತಾಲೂಕಿನಲ್ಲಿ ಇದುವರೆಗೂ ಶಾಲಾ ಅಡುಗೆ ಕೇಂದ್ರಗಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಯಾವುದೇ ರೀತಿಯ ಲೋಪದೋಷಗಳು ದೂರುಗಳು ಕಂಡು ಬಂದಿರುವುದಿಲ್ಲ ಹಾಗೂ ಎಲ್ಲಾ ಅಡುಗೆದಾರರಿಗೆ ಏಪ್ರಾನ್ ಧರಿಸುವಂತೆ ಆಹಾರ ಧಾನ್ಯಗಳ ಗುಣಮಟ್ಟ ಕಾಯ್ದುಕೊಳ್ಳುವ ಬಗ್ಗೆ, ತೂಕ ಮಾಪನದ ಸರಿಯಾದ ನಿರ್ವಹಣೆ ಬಗ್ಗೆ, ದಾಖಲೆಗಳ ನಿರ್ವಹಣೆ, ಸರಿಯಾದ ಕ್ರಮಗಳೊಂದಿಗೆ ಕಾರ್ಯನಿರ್ವಹಿಸಲು ಮಾರ್ಗದರ್ಶನ ನೀಡಿದರು. ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ್ವರ ವಿಭೂತಿ ಮಾತನಾಡಿ, ಬಿಸಿಯೂಟ ನಿರ್ವಹಣೆಯಲ್ಲಿ ಮುಖ್ಯ ಅಡುಗೆದಾರರ ಪಾತ್ರ, ಸಹಾಯಕ ಅಡುಗೆದಾರರ ಪಾತ್ರ, ಮುಖ್ಯೋಪಾಧ್ಯಾಯರ ಪಾತ್ರ, ಸಹ ಶಿಕ್ಷಕರ ಪಾತ್ರ, ದೈಹಿಕ ಶಿಕ್ಷಕರ ಪಾತ್ರ, ಆರೋಗ್ಯದ ಬಗ್ಗೆ, ಸ್ವಚ್ಛತೆ ಬಗ್ಗೆ ಪರಿಪೂರ್ಣ ಮಾಹಿತಿ ಮತ್ತು ಮಾರ್ಗದರ್ಶ ನೀಡಿದರು.

ಕಾರ್ಯಾಗಾರದಲ್ಲಿ ಸಿ.ಆರ್.ಪಿ ಗಳಾದ ನಿಮ್ ನಾಯ್ಕರ್, ಚಂದ್ರು ಪಾಟೀಲ, ಜನಗೇರಿ, ನದಾಫ್, ಖಾದರನವರ ಹಾಗೂ ಅಕ್ಷರ ದಾಸೋಹ ಕಚೇರಿಯ ಪ್ರಥಮ ದರ್ಜೆ ಸಹಾಯಕರು ಶ್ರೀಮತಿ ಗೀತಾ ಎಸ್ ಬಾರ್ಕಿ, ಎಂ ಎಸ್ ಗೌಡ್ರ ಸೇರಿದಂತೆ ಮುಖ್ಯ ಅಡುಗೆ ಸಿಬ್ಬಂದಿ ಹಾಗೂ ಸಹಾಯಕ ಅಡುಗೆ ಸಿಬ್ಬಂದಿಗಳು ಹಾಜರಿದ್ದರು.

# ಸಾಯಿಬಾಬಾ ಮಂದಿರದಲ್ಲಿ ಅನ್ನಸಂತರ್ಪಣೆ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಇಲ್ಲಿನ ಬಸ್‌ನಿಲ್ದಾಣ ಹತ್ತಿರದ ಈಶ್ವರ ನಗರದಲ್ಲಿನ ಸಾಯಿಬಾಬಾ ದೇವಸ್ಥಾನದಲ್ಲಿ ಶ್ರಾವಣ ಮಾಸದ ಅಂಗವಾಗಿ ಗುರುವಾರ ಬೆಳಗ್ಗೆ ದೇವರ ಮೂರ್ತಿಗೆ ಅಭಿಷೇಕ, ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ನೆರವೇರಿತು.

ನರೇಗಲ್ಲ ಹಾಗೂ ಸುತ್ತಮುತ್ತಲಿನ ಭಕ್ತರು ಸಾಯಿಬಾಬಾನ ದರ್ಶನಾಶೀರ್ವಾದ ಪಡೆದು ಪ್ರಸಾದವನ್ನು ಸ್ವೀಕರಿಸಿ ಪುನೀತರಾದರು. ಈ ಸಂದರ್ಭದಲ್ಲಿ ದೇವಸ್ಥಾನ ಅರ್ಚಕ ಮಲ್ಲಪ್ಪ ಸಂಗನಾಳ, ಗುರುಪಾದಪ್ಪ ಬೆಲ್ಲದ, ಕುಬೇರಪ್ಪ ಹೂಗಾರ, ಮಾಂತಪ್ಪ ಜೋಳದ, ಜಿ.ಎಸ್ ಪಾಟೀಲ, ವಿ.ಬಿ ಸಂಗನಾಳ, ಪ್ರಭುದೇವ ಮಕ್ಕನಗೌಡ್ರ, ಶಿವಾನಂದ ಬಂಡಿಹಾಳ, ಶಿವಕುಮಾರ ಮುಳಗುಂದ, ಸಚಿನ ಹಂಜಿ, ಕಿರಣ ಜೋಡಗಂಬಳಿ, ಸಂಗಯ್ಯ ಹಿರೇಮಠ, ವೀರೇಶ ಮುಂಡೇವಾಡಿ, ಸುರೇಶ ರಾಯಬಾಗಿ ಹಾಗೂ ಯುವಕರು ಉಪಸ್ಥಿತರಿದ್ದರು.

# ಬ್ರಹ್ಮಕುಮಾರಿ ವಿದ್ಯಾಲಯದಲ್ಲಿ ರಕ್ಷಾ ಬಂಧನ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ರಕ್ಷಾ ಬಂಧನ ಹಬ್ಬವು ಸಹೋದರ-ಸಹೋದರಿಯರಲ್ಲಿ ಪ್ರೀತಿ, ಭಾತೃತ್ವನ್ನು ಬೆಳೆಸುವ ಹಬ್ಬವಾಗಿದೆ ಎಂದು ಬಿ.ಕೆ ಜಯಂತಿ ಅಕ್ಕನವರು ಹೇಳಿದರು.

ಇಲ್ಲಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಶಾಖೆಯಲ್ಲಿ ಏರ್ಪಡಿಸಲಾಗಿದ್ದ ರಕ್ಷಾ ಬಂಧನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಸಾಮಾನ್ಯವಾಗಿ ಒಡ ಹುಟ್ಟಿದವರಲ್ಲಿ ಸಹೋದರತ್ವ ಭಾವನೆ ಇದ್ದೇ ಇರುತ್ತದೆ. ಆದರೆ ಅನ್ಯರನ್ನು ಕಂಡಾಗ ನಮ್ಮಲ್ಲಿ ಪವಿತ್ರ ಸಂಬಂಧ, ಸಹೋದರತ್ವ ಭಾವನೆ ಬರಬೇಕಾದರೆ ನಮ್ಮೆಲ್ಲರ ಆತ್ಮಗಳ ತಂದೆ ಪರಮಾತ್ಮ ಎನ್ನುವ ಸತ್ಯ ಜ್ಞಾನವನ್ನು ಅರಿತುಕೊಂಡಾಗ ಸಾಧ್ಯವಾಗುತ್ತದೆ. ಈ ಶ್ರಾವಣ ಮಾಸದಲ್ಲಿ ಮಾತ್ರ ಪುರಾಣ, ಪ್ರವಚನ, ದೇವರಲ್ಲಿ ಭಕ್ತಿಯನ್ನು ಮಾಡುವುದಲ್ಲ. ದಿನನಿತ್ಯ ಜೀವಾತ್ಮಗಳು ಪರಮಾತ್ಮನ ಸಂದೇಶವನ್ನು ಶ್ರವಣ ಮಾಡುತ್ತಿರಬೇಕು. ಆಗ ಆತ್ಮದ ಅರಿವು ನಮಗೆ ಆಗುತ್ತದೆ. ಶ್ರಾವಣ ಮಾಸವನ್ನು ವಿಚಾರ ಶಕ್ತಿಯಿಂದ ಆಚರಣೆ ಮಾಡಿ, ಮನ, ವಚನ, ಕರ್ಮ ಸಂಬಂಧ ಸಂಪರ್ಕದಲ್ಲಿ ಪವಿತ್ರತೆಯ ಸಂಕಲ್ಪ ಮಾಡಿದಾಗ ಮಾತ್ರ ಫಲ ಪ್ರಾಪ್ತಿ ಆಗಲು ಸಾಧ್ಯ ಎಂದರು.

ಸಹೋದರ-ಸಹೋದರಿಯರಿಗೆ ಬಿ.ಕೆ ಜಯಂತಿ ಅಕ್ಕನವರು ರಾಖಿಯನ್ನು ಕಟ್ಟಿ ಸಂಕಲ್ಪ ಮಾಡಿದರು. ಇದೇ ಸಂದರ್ಭದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿವೃತ್ತ ಚಾಲಕ ಆರ್.ಎನ್ ಸಂಕನಗೌಡರ ಅವರನ್ನು ಸನ್ಮಾನಿಸಲಾಯಿತು. ಶಾಖೆಯ ಸಂಚಾಲಕಿ ಬಿ.ಕೆ ಸರೋಜಕ್ಕ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಹಳ್ಳಿಗುಡಿಯಲ್ಲಿ ಪ್ಯಾಸೆಂಜರ ವಿಶೇಷ ರೈಲು ನಿಲುಗಡೆ ಸೌಲಭ್ಯಕ್ಕೆ ಚಾಲನೆ

# ಸ್ಥಳೀಯರ 25 ವರ್ಷಗಳ ಕನಸು ನನಸಾದ ಘಳಿಗೆ




■ವಿಜಯಸಾಕ್ಷಿ ಸುದ್ದಿ, ಗದಗ

ಸತತ 25 ವರ್ಷಗಳ ಕಾಲ ಹಳ್ಳಿಗುಡಿ, ಹಳ್ಳಿಕೇರಿ, ತಿಮ್ಮಾಪೂರ ಗ್ರಾಮದ ಜನರು ದಿನನಿತ್ಯ ರೈಲು ಪ್ರಯಾಣಕ್ಕೆ ಸಂಚರಿಸಲು ಗ್ರಾಮಸ್ಥರು ಪರದಾಡುವಂತಾಗಿತ್ತು. ಈ ಭಾಗದ ಗ್ರಾಮಸ್ಥರ ಮನವಿ ಮೇರೆಗೆ ಕೇಂದ್ರ ಸರ್ಕಾರ ಜನರ ನಿರೀಕ್ಷೆಯಂತೆ ರೈಲು ನಿಲ್ದಾಣ ಹಾಗೂ ಪ್ಯಾಸೆಂಜರ ವಿಶೇಷ ರೈಲಿಗೆ ನಿಲುಗಡೆ ಸೌಲಭ್ಯ ಒದಗಿಸಿಕೊಟ್ಟಿರುವದು ಸಂತಸವಾಗಿದೆ ಎಂದು ಸಂಸದ ಶಿವಕುಮಾರ ಉದಾಸಿ ಹೇಳಿದರು.

ಭಾರತ ಸರ್ಕಾರ ಹಾಗೂ ಹುಬ್ಬಳ್ಳಿ ರೈಲ್ವೆ ವಿಭಾಗ, ಗದಗ ಹಳ್ಳಿಗುಡಿ ಹಾಲ್ಟ್ ರೈಲು ನಿಲ್ದಾಣದ ಉದ್ಘಾಟನೆ ಮತ್ತು ರೈಲು ಸಂಖ್ಯೆ 07381/07382 ಎಸ್.ಎಸ್.ಎಸ್. ಹುಬ್ಬಳ್ಳಿ-ಕಾರಟಗಿ-ಎಸ್.ಎಸ್.ಎಸ್. ಹುಬ್ಬಳ್ಳಿ ಪ್ಯಾಸೆಂಜರ್ ವಿಶೇಷ ರೈಲಿಗೆ ಹಳ್ಳಿಗುಡಿಯಲ್ಲಿ ನಿಲುಗಡೆ ಸೌಲಭ್ಯಕ್ಕೆ ಶುಕ್ರವಾರದಂದು ಜ್ಯೋತಿ ಬೆಳಗಿಸಿ, ರೈಲು ಗಾಡಿಗೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ರೈಲು ಸಂಖ್ಯೆ 07381 ಎಸ್. ಎಸ್.ಎಸ್. ಹುಬ್ಬಳ್ಳಿ - ಕಾರಟಗಿ ಪ್ಯಾಸೆಂಜರ್ ವಿಶೇಷ ರೈಲು ಹಳ್ಳಿಗುಡಿ ಹಾಲ್ಟ್ ನಿಲ್ದಾಣಕ್ಕೆ ಬೆಳಿಗ್ಗೆ 10:30 ಗಂಟೆಗೆ ಆಗಮಿಸಿ 10:31 ಗಂಟೆಗೆ ಹೊರಡಲಿದೆ. ರೈಲು ಸಂಖ್ಯೆ 07382 ಕಾರಟಗಿ- ಎಸ್. ಎಸ್.ಎಸ್. ಹುಬ್ಬಳ್ಳಿ ಪ್ಯಾಸೆಂಜರ್ ವಿಶೇಷ ರೈಲು ಹಳ್ಳಿಗುಡಿ ಹಾಲ್ಟ್ ನಿಲ್ದಾಣಕ್ಕೆ ಸಂಜೆ 4:22 ಗಂಟೆಗೆ ಆಗಮಿಸಿ 4:23 ಗಂಟೆಗೆ ಹೊರಡಲಿದೆ. ಈ ರೈಲಿನ ನಿಲುಗಡೆಯಿಂದ ಹಳ್ಳಿಗುಡಿ, ಹಳ್ಳಿಕೇರಿ, ತಿಮ್ಮಾಪುರ ಮತ್ತು ಹತ್ತಿರದ ಇತರ ಹಳ್ಳಿಗಳ ಗ್ರಾಮಸ್ಥರಿಗೆ ರೈಲಿನಲ್ಲಿ ಪ್ರಯಾಣಿಸಲು ಅನುಕೂಲವಾಗಲಿದೆ. ಸಾರ್ವಜನಿಕರು ಈ ರೈಲು ನಿಲುಗಡೆಯ ಸೌಲಭ್ಯವನ್ನು ಬಳಸಿಕೊಳ್ಳಬೇಕೆಂದು ಸಂಸದ ಶಿವಕುಮಾರ ಉದಾಸಿ ಕರೆ ನೀಡಿದರು. ಹುಬ್ಬಳ್ಳಿ ರೈಲ್ವೆ ವಿಭಾಗಿಯ ವ್ಯವಸ್ಥಾಪಕ ಸಂತೋಷ ವರ್ಮಾ ಮಾತನಾಡಿ, ಹುಬ್ಬಳ್ಳಿ, ಗದಗ, ಕೊಪ್ಪಳದ ಕಡೆಗೆ ರೈಲಿನಲ್ಲಿ ಹೋಗಲು ಹಳ್ಳಿಗುಡಿಯಲ್ಲಿ ಹಾಲ್ಟ್ ನಿಲ್ದಾಣ ಮತ್ತು ರೈಲುಗಳಿಗೆ ನಿಲುಗಡೆಯನ್ನು ಒದಗಿಸಿ ಅನುಕೂಲ ಮಾಡಿಕೊಡುವಂತೆ ಹಳ್ಳಿಗುಡಿ, ಹಳ್ಳಿಕೇರಿ, ತಿಮ್ಮಾಪುರ ಮತ್ತು ಹತ್ತಿರದ ಇತರ ಹಳ್ಳಿಗಳ ಗ್ರಾಮಸ್ಥರು ಮತ್ತು ಜನಪ್ರತಿನಿಧಿಗಳ ಬಹುದಿನಗಳ ಬೇಡಿಕೆಯಾಗಿತ್ತು. ಅದರಂತೆ ಹರ್ಲಾಪುರ ಮತ್ತು ಸೋಂಪುರ ರೋಡ್ ನಿಲ್ದಾಣಗಳ ನಡುವೆ ಲೆವೆಲ್ ಕ್ರಾಸಿಂಗ್ ಗೇಟ್ ಸಂಖ್ಯೆ 45ರ ಬಳಿ ಹಳ್ಳಿಗುಡಿ ಹಾಲ್ಟ್ ನಿಲ್ದಾಣವನ್ನು ಒದಗಿಸಲಾಗಿದೆ. ಹಳ್ಳಿಗುಡಿ ಹಾಲ್ಟ್ ನಲ್ಲಿ ತಲಾ 350 ಮೀ ಉದ್ದದ ಎರಡು ರೈಲ್ ಲೆವೆಲ್ ಪ್ಲಾಟ್ ಫಾರ್ಮ್‌ಅನ್ನು ಒದಗಿಸಲಾಗಿದೆ. ಒಂದು ಪೋರ್ಟಬಲ್ ಟಿಕೆಟ್ ಕೌಂಟರನ್ನು ಒದಗಿಸಲಾಗಿದೆ. ರೈಲು ಟಿಕೆಟ್ ಗಳನ್ನು ವಿತರಿಸಲು ಕಮಿಷನ್ ಆಧಾರದಲ್ಲಿ ಒಬ್ಬ ಹಾಲ್ಟ್ ಏಜೆಂಟ್ ನನ್ನು ಸಹ ನೇಮಿಸಲಾಗಿದೆ ಎಂದು ತಿಳಿಸಿದರು.

ರೈಲು ಸಂಖ್ಯೆ 07381/07382 ಎಸ್.ಎಸ್.ಎಸ್. ಹುಬ್ಬಳ್ಳಿ - ಕಾರಟಗಿ- ಎಸ್.ಎಸ್.ಎಸ್. ಹುಬ್ಬಳ್ಳಿ ಪ್ಯಾಸೆಂಜರ್ ವಿಶೇಷ ರೈಲಿಗೆ ಹಳ್ಳಿಗುಡಿ' ಹಾಲ್ಟ್ ನಿಲ್ದಾಣದಲ್ಲಿ ಸೆಪ್ಟೆಂಬರ್ 1 ರಿಂದ 29 ಫೆಬ್ರವರಿ 2024 ರವರೆಗೆ ಒಂದು ನಿಮಿಷದ ಅವಧಿಯ ಪ್ರಾಯೋಗಿಕ ನಿಲುಗಡೆಯನ್ನು ಒದಗಿಸಲಾಗಿದ್ದು, ಪ್ರಯಾಣಿಕರ ಪ್ರತಿಕ್ರಿಯೆಯನ್ನು ಆಧರಿಸಿ ಈ ಪ್ರಾಯೋಗಿಕ ನಿಲುಗಡೆಯನ್ನು ಮುಂದುವರೆಸುವ ಕುರಿತು ನಿರ್ಧರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಹಳ್ಳಿಕೇರಿ ಗ್ರಾಮ ಪಂಚಾಯತಿ ಅಧ್ಯಕ್ಷ ಮರಿಯವ್ವ ಹಿರೇಮನಿ, ಹುಬ್ಬಳ್ಳಿಯ ವಿಭಾಗಿಯ ವಾಣಿಜ್ಯ ವ್ಯವಸ್ಥೆಯ ಸಂತೋಷ ಹೆಗ್ಡೆ, ಮುಂಡರಗಿ ತಹಸೀಲ್ದಾರ ಧನಂಜಯ, ಹುಬ್ಬಳ್ಳಿ ರೈಲ್ವೆ ಪಿ.ಆರ್.ಓ ಪ್ರಾಣೇಶ, ರೈಲ್ವೆ ಪೊಲೀಸ್ ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗಿಯಾಗಿದ್ದರು.

# ವಲಯ ಮಟ್ಟದ ಕ್ರೀಡಾಕೂಟದಲ್ಲಿ ಸಾಧನೆ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮಿಪದ ನಿಡುಗುಂದಿಯಲ್ಲಿ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ನರೇಗಲ್ಲನ ಶ್ರೀ ಜಗದ್ಗುರು ಪಂಚಾಚಾರ್ಯ ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆಯ ಶ್ರೀ ರೇಣುಕಾಚಾರ್ಯ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳು ಗ್ರೂಪ್ ಮಟ್ಟದ ವಾಲಿಬಾಲ್ ಆಟದಲ್ಲಿ ರಾಹುಲ್ ಚಳ್ಳಮರದ ಅವರ ತಂಡ ಪ್ರಥಮಸ್ಥಾನ ಪಡೆದಿದೆ.

ವೈಯಕ್ತಿಕ ಆಟಗಳಲ್ಲಿ 200ಮೀ ಓಟದಲ್ಲಿ ರಾಹುಲ್ ಚಳ್ಳಮರದ ಪ್ರಥಮ, ಅಡೆತಡೆ ಓಟದಲ್ಲಿ ತೃತೀಯ, ಇಂಚರ ಪಾಟೀಲ 400ಮೀ ಓಟದಲ್ಲಿ ತೃತೀಯ ಸ್ಥಾನ ಪಡೆದು ತಾಲೂಕಾ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ ಎಂದು ದೈಹಿಕ ಶಿಕ್ಷಕಿ ವಿಜಯಲಕ್ಷ್ಮಿ ಬಿಂಗಿ ತಿಳಿಸಿದ್ದಾರೆ.

ಈ ಎಲ್ಲ ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು, ಉಪಾಧ್ಯಕ್ಷ ಎಸ್. ಕೆ ಪಾಟೀಲ, ಮುಖ್ಯ ಶಿಕ್ಷಕಿ ಎನ್. ಎಸ್. ಹಿರೇಮಠ ಹಾಗೂ ಸರ್ವ ಸದಸ್ಯರು ಹರ್ಷ ವ್ಯಕ್ತಡಿಸಿದ್ದಾರೆ.

## ಶ್ರದ್ಧಾಂಜಲಿ ಕಾರ್ಯಕ್ರಮ ಇಂದು



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಾ ಕನ್ನಡ ಸಾಹಿತ್ಯ ಮತ್ತು ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಕಾರ್ಯನಿರತ ಪತ್ರಕರ್ತರ ಸಂಘ ಸೇರಿ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಇತ್ತೀಚೆಗೆ ಅಗಲಿದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ. ಸಿ.ವಿ ಕೆರಿಮನಿ ಅವರ ದಿವ್ಯ ಚೇತನಕ್ಕೆ ಶ್ರದ್ಧಾಂಜಲಿ ಕಾರ್ಯಕ್ರಮ ಶನಿವಾರ ಸಂಜೆ ಪಟ್ಟಣದ ಶ್ರೀ ತಾ.ಪಾ.ಮ. ಬಳಗದ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ ಅಧ್ಯಕ್ಷತೆ ವಹಿಸುವರು. ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ, ವಿ.ಪಾಚಾರ್ಯ ಎಸ್.ಎಫ್ ಶಿಗ್ಲಿ, ಡಿ.ಬಿ ಬಳಿಗಾರ, ಸುನೀಲ ಮಹಾಂತಶೆಟ್ಟರ, ಮಹೇಶ ಹೊಗೆಸೊಪ್ಪಿನ ಮುಂತಾದವರು ಪಾಲ್ಗೊಳ್ಳುವರು.



ಕರ್ನಾಟಕ ವಿಧಾನ ಪರಿಷತ್ತಿನ ನೂತನ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಉಮಾಶ್ರೀ, ಎಂ.ಆರ್ ಸೀತಾರಾಮ್ ಹಾಗೂ ಸುಧಾಮ್ ದಾಸ್ ಅವರು ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ಗೌರವಿಸಿದರು. ಈ ಸಂದರ್ಭದಲ್ಲಿ ನೂತನ ಸದಸ್ಯರ ಅಪಾರ ಅಭಿಮಾನಿ ಬಳಗ, ಪರಿಷತ್ತಿನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಸಚಿವ ಎಚ್.ಕೆ ಪಾಟೀಲರ ಭೇಟಿ ಹಿನ್ನೆಲೆ: ಜನತೆಯಲ್ಲಿ ಗರಿಗೆದರಿದ ನಿರೀಕ್ಷೆಗಳು

# ಅಭಿವೃದ್ಧಿಯನ್ನು ಎದುರುನೋಡುತ್ತಿದೆ ಶಿರಹಟ್ಟಿ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ ಕುರಿತು ವಿಶೇಷ ಕಾಳಜಿ ಹೊಂದಿರುವ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲರು ಶನಿವಾರ ಶಿರಹಟ್ಟಿ ಪಟ್ಟಣದಲ್ಲಿ ತಾಲೂಕಿನ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆಂದು ಅಧಿಕೃತ ಪ್ರವಾಸ ಪಟ್ಟಿ ಬಿಡುಗಡೆಯಾಗುತ್ತಿದ್ದಂತೆಯೇ ಪಟ್ಟಣವೂ ಸೇರಿದಂತೆ ವಿವಿಧ ಗ್ರಾಮೀಣ ಪ್ರದೇಶಗಳ ಜನತೆಯಲ್ಲಿ ಅನೇಕ ನಿರೀಕ್ಷೆಗಳು ಗರಿಗೆದರಿವೆ.

ಸಾರಿಗೆ ವ್ಯವಸ್ಥೆ: ನೂತನವಾಗಿ ಸಾರಿಗೆ ಬಸ್ ಡಿಪೋ ಪ್ರಾರಂಭವಾದಾಗಿನಿಂದಲೂ ಘಟಕಕ್ಕೆ ಹೊಸ ಬಸ್‌ಗಳನ್ನು ನೀಡಿಲ್ಲ. ಇಡೀ ತಾಲೂಕಿಗೆ ಕೇವಲ 19 ಶೆಡ್ಯೂಲ್‌ಗಳಿದ್ದು, ಇದರಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಕಾಯುವುದೇ ಒಂದು ಕಾಯಕವಾಗಿದೆ. ಹಲವು ಬಾರಿ ಪ್ರತಿಭಟನೆ ಮಾಡಿದರೂ ಹೆಚ್ಚುವರಿ ಬಸ್ ವ್ಯವಸ್ಥೆ ಆಗಿಲ್ಲ. ಸಚಿವರು ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಬೇಕೆಂಬುದು ವಿದ್ಯಾರ್ಥಿಗಳ, ಸಾರ್ವಜನಿಕರ ಒತ್ತಾಸೆಯಾಗಿದೆ.

ದ.ರಾ ಬೇಂದ್ರೆ ಭವನಕ್ಕೆ ಕಾಯಕಲ್ಪ: ಪಟ್ಟಣದಲ್ಲಿ ಈ ಹಿಂದೆ ಮಾಜಿ ಸಂಸದ ಪ್ರೊ. ಐ.ಜಿ ಸನದಿ ಅವಧಿಯಲ್ಲಿ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ನಿರ್ಮಿಸಲಾದ ದ.ರಾ ಬೇಂದ್ರೆ ಭವನವು ಸಾಹಿತ್ಯ ಚಟುವಟಿಕೆಗಳಿಗೆ ಮೀಸಲಿರಬೇಕಿತ್ತು. ಆದರೆ ಇಂದು ಪಟ್ಟಣ ಪಂಚಾಯತಿಯ ಘನತ್ಯಾಜ್ಯ ವಸ್ತುಗಳ ಶೇಖರಣೆಯ ತಾಣವಾಗಿದೆ. ಇತ್ತೀಚೆಗೆ ಪಟ್ಟಣಕ್ಕೆ ಭೇಟಿ ನೀಡಿದ್ದ ಮಾಜಿ ಸಚಿವ ಎಸ್.ಎಸ್ ಪಾಟೀಲರು ಭವನಕ್ಕೆ ಕಾಯಕಲ್ಪ ನೀಡಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದರು. ದ.ರಾ ಬೇಂದ್ರೆ ಅವರ ಹುಟ್ಟೂರಲ್ಲೇ ಅವರ ಭವನಕ್ಕೆ ಅಗೌರವ ತೋರಿದಂತಾಗುತ್ತಿದ್ದು, ಈ ಭವನಕ್ಕೂ ಸಹ ಸಚಿವರು ಕಾಯಕಲ್ಪ ನೀಡಿ ಸಾಹಿತ್ಯ ಚಟುವಟಿಕೆಗಳಿಗೆ ಉತ್ತಮ ವೇದಿಕೆಯನ್ನಾಗಿಸುವುದಕ್ಕೆ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆನ್ನುವುದು ಸ್ಥಳೀಯ ಸಾಹಿತಿಗಳ ಒತ್ತಾಯ.



100 ಹಾಸಿಗೆ ಆಸ್ಪತ್ರೆ ನಿರ್ಮಾಣ: ಪಟ್ಟಣದಲ್ಲಿ 100 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಕ್ಕೆ ಜಮೀನು ಖರೀದಿಯಾಗಿದ್ದು, ಸೂಕ್ತ ಅನುದಾನ ಲಭ್ಯವಿಲ್ಲ. ಈಗಿರುವ 30 ಹಾಸಿಗೆಗಳ ಆಸ್ಪತ್ರೆಯಲ್ಲಿಯೇ ತಾಲೂಕಾ ಆಸ್ಪತ್ರೆ ನಡೆಯುತ್ತಿದ್ದು, ಸೂಕ್ತ ಸ್ಥಳಾವಕಾಶವಿಲ್ಲದೇ ರೋಗಿಗಳು ಪರದಾಡುತ್ತಿದ್ದಾರೆ. ಹೆಬ್ಬಾಳ ಮತ್ತು ಬೆಳ್ಳಟ್ಟಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24/7 ಹೆರಿಗೆ ಆಸ್ಪತ್ರೆ ಇದ್ದರೂ, ಸಮರ್ಪಕ ವೈದ್ಯರಿಲ್ಲ. ಇದರಿಂದ ಗ್ರಾಮೀಣ ಪ್ರದೇಶಗಳ ಜನತೆ ಬೇರೆ ಸ್ಥಳಗಳಿಗೆ ತೆರಳಬೇಕಾದ ಅನಿವಾರ್ಯತೆಯಿದೆ.

ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಿಗೆ ಕಾಯಕಲ್ಪ: ರೈತರಿಗೆ ವರದಾನವಾಗಬೇಕಿದ್ದ ಏತ ನೀರಾವರಿ ಯೋಜನೆಗಳು ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಕಾಲುವೆಗಳು ಮುಚ್ಚಿ ಹೋಗಿದ್ದು, ಇದರಿಂದ ತುಂಗಭದ್ರಾ ನದಿ ಹಾದು ಹೋಗಿದ್ದರೂ ಸಹ ರೈತರಿಗೆ ಪ್ರಯೋಜನವಿಲ್ಲದಂತಾಗಿದೆ. ಈ ಬಗ್ಗೆ ಹಲವಾರು ಬಾರಿ ರೈತರು ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಇದೀಗ ಜಿಲ್ಲಾ ಉಸ್ತುವಾರಿ ಸಚಿವರು ರೈತರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಿಗೆ ಕಾಯಕಲ್ಪ ನೀಡಬೇಕೆಂದು ರೈತರು ಎದುರುನೋಡುತ್ತಿದ್ದಾರೆ.

ಪ್ರವಾಸೋದ್ಯಮ: ಈ ಹಿಂದೆ ಶಿರಹಟ್ಟಿಯ ಶ್ರೀ ಜ.ಫಕೀರೇಶ್ವರ ಮಠಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಉಭಯ ಶ್ರೀಗಳು ಯಾತ್ರಿ ನಿವಾಸ ನಿರ್ಮಾಣಕ್ಕಾಗಿ ಅನುದಾನ ಕೋರಿದ್ದರು. ಇದಕ್ಕೆ ಸಚಿವ ಎಚ್.ಕೆ ಪಾಟೀಲರು ಬರುವ ಆರ್ಥಿಕ ವರ್ಷದಲ್ಲಿ ಅನುದಾನ ಒದಗಿಸುವ ಭರವಸೆಯನ್ನೂ ನೀಡಿದ್ದರು. ಮಾತಿನಂತೆ 1 ಕೋಟಿ ರೂ ಅನುದಾನವನ್ನೂ ಒದಗಿಸುವ ಮೂಲಕ ನುಡಿದಂತೆ ನಡೆದು ತೋರಿಸಿದ್ದಾರೆ. ಅದರಂತೆ ಕಪ್ಪತ್ತಗುಡ್ಡ, ಮಾಗಡಿ ಕೆರೆ, ದೇವಿಹಾಳದ ಶ್ರೀ ಹೊಳಲಮ್ಮದೇವಿ ದೇವಸ್ಥಾನವೂ ಸೇರಿದಂತೆ ಇನ್ನೂ ಅನೇಕ ಸ್ಥಳಗಳನ್ನು ಗುರುತಿಸಿ, ಅಭಿವೃದ್ಧಿಗೊಳಿಸಿ ತಾಲೂಕನ್ನು ಪ್ರವಾಸಿ ತಾಣವನ್ನಾಗಿಸಬೇಕೆಂಬ ಬೇಡಿಕೆಯೂ ಇದೆ.

> 100 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಕ್ಕೆ, ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳ ಕಾರ್ಯಾರಂಭಕ್ಕೆ, ಕಪ್ಪತ್ತಗುಡ್ಡವನ್ನು ಪ್ರವಾಸಿತಾಣವನ್ನಾಗಿಸುವುದಕ್ಕೆ ಈಗಾಗಲೇ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಸರಕಾರದ ಮಟ್ಟದಲ್ಲಿ ಇವೆಲ್ಲವುಗಳಿಗೂ ಶೀಘ್ರವೇ ಅನುದಾನ ಒದಗಿಸಿಕೊಡಬೇಕು.
>
> – ಡಾ. ಚಂದ್ರು ಲಮಾಣಿ
> ಶಾಸಕರು, ಶಿರಹಟ್ಟಿ.

ಶಿರಹಟ್ಟಿಯು ಮತಕ್ಷೇತ್ರದ ಕೇಂದ್ರಸ್ಥಳವಾಗಿದ್ದರೂ ಇಲ್ಲಿ ತಾಲೂಕಾ ಮಟ್ಟದ ಅನೇಕ ಅಧಿಕಾರಿಗಳು ಕೇಂದ್ರಸ್ಥಾನದಲ್ಲಿ ಲಭ್ಯವಿರುವದಿಲ್ಲ. ಅಧಿಕಾರಿಗಳು ನಿಗದಿತ ಸಮಯದಲ್ಲಿ ಕಚೇರಿಗೆ ಆಗಮಿಸದೇ ಇರುವುದು, ನಿತ್ಯವೂ ಮೀಟಿಂಗ್ ನೆಪ ಹೇಳಿಕೊಂಡು ಕಚೇರಿಗೆ ಬರದೇ ಇರುವುದು ಹೀಗೆ ಹಲವು ಸಮಸ್ಯೆಗಳನ್ನು ಇಲ್ಲಿಯ ಜನತೆ ಅನುಭವಿಸುತ್ತಿದ್ದು, ಇದಕ್ಕೆ ಸಚಿವರು ಜಿಡ್ಡುಗಟ್ಟಿರುವ ಇಲ್ಲಿಯ ಆಡಳಿತ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಬೇಕೆಂಬುದು ಹಲವರ ಅಭಿಪ್ರಾಯ.

## ನುಲಿಯ ಚಂದಯ್ಯ ಕೊರವರ ಸಾಂಸ್ಕೃತಿಕ ಪ್ರತಿನಿಧಿ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ತನ್ನ ಕಾಯಕದಲ್ಲಿಯೇ ದೇವರನ್ನು ಕಂಡ ಮಹಾನ್ ಶರಣ ನುಲಿಯ ಚಂದಯ್ಯನವರು ಕೊರಚ, ಕೊರವ ಸಮುದಾಯದ ಸಾಂಸ್ಕೃತಿಕ ಪ್ರತಿನಿಧಿಯಾಗಿದ್ದಾರೆ ಎಂದು ಮುಖ್ಯ ಶಿಕ್ಷಕಿ ಬಿ.ಜಿ ಶಿರ್ಸಿ ಹೇಳಿದರು.

ಪಟ್ಟಣದ ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿವಶರಣ ನುಲಿಯ ಚಂದಯ್ಯನವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಲ್ಯಾಣ ನಾಡಿನಲ್ಲಿ ಶ್ರೇಷ್ಠ ಶರಣ ಅನುಭವಿ ವಚನಕಾರ. ಹುಲ್ಲು ತಂದು ಹಗ್ಗ ಹೊಸೆದು, ಮಾರಾಟ ಮಾಡಿ ಬಂದ ಹಣದಿಂದ ಜಂಗಮ ದಾಸೋಹ ನಡೆಸುತ್ತಿದ್ದರು. ಗುರು, ಲಿಂಗ, ಜಂಗಮರ ತತ್ವವನ್ನು ಜಗತ್ತಿಗೆ ಪಸರಿಸಿ, ನುಡಿದಂತೆ ನಡೆದ ಶ್ರೇಷ್ಠ ವಚನಕಾರರಾಗಿದ್ದರು. ಬಸವಣ್ಣನವರ ವಿನೂತನ ವಿಚಾರ ಧಾರೆಗೆ, ಧಾರ್ಮಿಕ ಚಿಂತನೆಗೆ ಆಕರ್ಷಿತರಾಗಿ ಕಲ್ಯಾಣಕ್ಕೆ ಬಂದು ದಾಸೋಹ ಮಾಡುತ್ತ ಬದುಕಿದ ಶ್ರೇಷ್ಠ ಕಾಯಕ ಯೋಗಿ. ಇಂತಹ ಶರಣರ ವಚನಗಳನ್ನು ಓದಿ ಅವರು ಹಾಕಿಕೊಟ್ಟ ದಾರಿಯಲ್ಲಿ ನಾವೆಲ್ಲರೂ ನಡೆಯೋಣ ಎಂದರು.

ಈ ಸಂದರ್ಭದಲ್ಲಿ ಎಂ.ವಿ ಕಡೆತೋಟದ, ಕೆ.ಐ ಕೋಳಿವಾಡ, ವಿಜಯಲಕ್ಷ್ಮೀ ಜಾಧವ, ವಿದ್ಯಾವತಿ ಗ್ರಾಮಪುರೋಹಿತ, ಸುವರ್ಣ ಹಿರೇಮಠ, ಪೂರ್ಣಿಮಾ ಅಂಗಡಿ, ಮಲ್ಲಮ್ಮ ಶಿಳ್ಳಿನ, ಸಾವಿತ್ರಿ ಮಾನ್ವಿ, ಸೀತಾ ಕುಲಕರ್ಣಿ, ಎಸ್.ಎ ಶಿಂಧೆ, ಐ.ಬಿ ಒಂಟೆಲಿ, ಜೆ.ವಿ ಕೆರಿಯವರ, ಎನ್.ಜೆ ಸಂಗನಾಳ ಸೇರಿದಂತೆ ಸಿಬ್ಬಂದಿಗಳು, ವಿದ್ಯಾರ್ಥಿಗಳು ಇದ್ದರು.

## ಅಲಕ್ಶಂತ ಗಜಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಗಜಪಯಣಕ್ಕೆ ಚಾಲನೆ

■ವಿಜಯಸಾಕ್ಷಿ ಸುದ್ದಿ, ಮೈಸೂರು

ವಿಶ್ವ ವಿಖ್ಯಾತ 413ನೇ ಮೈಸೂರು ದಸರಾಗೆ ನಾಂದಿ ಹಾಡುವ ಗಜಪಯಣಕ್ಕೆ ನಾಗರಹೊಳೆ ಉದ್ಯಾನದ ಹೆಬ್ಬಾಗಿಲು ವೀರನಹೊಸಹಳ್ಳಿ ಬಳಿ ಶುಕ್ರವಾರ ಅಲಂಕೃತ ಗಜಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

9.45 ರಿಂದ 10-15 ರ ನಡುವೆ ಸಲ್ಲುವ ತುಲಾ ಶುಭ ಲಗ್ನದಲ್ಲಿ ಸಂಪ್ರದಾಯದಂತೆ ಮೈಸೂರು ಅರಮನೆ ಪುರೋಹಿತರಾದ ಪ್ರಹಲ್ಲಾದರಾವ್ ತಂಡ ವೀರನಹೊಸಹಳ್ಳಿ ಗೇಟ್ ಬಳಿಯ ಆಂಜನೇಯ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿದರು.

ಗಜಪಯಣದಲ್ಲಿ ಅಭಿಮನ್ಯು ನೇತೃತ್ವದಲ್ಲಿ ಅರ್ಜುನ, ಭೀಮಾ, ಗೋಪಿ, ಧನಂಜಯಾ, ವರಲಕ್ಷ್ಮಿ, ವಿಜಯಾ, ಮಹೇಂದ್ರ ಹಾಗೂ ಕಂಜನ್ ಆನೆಗಳು ಮೈಸೂರಿಗೆ ಆಗಮಿಸಲಿವೆ.









ಅರಣ್ಯ ಸಚಿವರಾದ ಈಶ್ವರ್ ಖಂಡ್ರೆ, ಹುಣಸೂರು ಶಾಸಕರಾದ ಹರೀಶ್ ಗೌಡ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿಗಳಾದ ಡಾ ಕೆ.ವಿ.ರಾಜೇಂದ್ರ, ಅರಣ್ಯಾಧಿಕಾರಿಗಳಾದ ಸೌರಭ್ ಕುಮಾರ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.

## ಸರಕಾರದಿಂದಲೇ ವಿಮಾನಯಾನ ಕಂಪನಿ ಆರಂಭದ ಪ್ರಸ್ತಾವ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ವಿಮಾನಯಾನ ಕಂಪನಿ ಆರಂಭಿಸುವ ಪ್ರಸ್ತಾವವಿದೆ. ಈ ಬಗ್ಗೆ ಪರಿಶೀಲಿಸಿ ಆದಷ್ಟು ಬೇಗ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ್ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ಕರೆದು ಮಾತನಾಡಿದ ಅವರು, "ವಿಮಾನ ನಿಲ್ದಾಣಗಳ ನಿರ್ವಹಣೆಗೆ ಪ್ರತ್ಯೇಕ ಪ್ರಾಧಿಕಾರವನ್ನು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದು. ಅದೇ ರೀತಿ ಸ್ವಂತ ವಿಮಾನಯಾನ ಕಂಪನಿ ಕೂಡ ಸ್ಥಾಪಿಸಿ, ರಾಜ್ಯದೊಳಗೆ ಸೇವೆ ಆರಂಭಿಸಲಾಗುವುದು" ಎಂದು ತಿಳಿಸಿದರು.

ಒಂದು ಹೊಸ ವಿಮಾನ ಖರೀದಿಗೆ 200 ಕೋಟಿ ವೆಚ್ಚವಾಗಲಿದೆ. 600 ಕೋಟಿ ವೆಚ್ಚದಲ್ಲಿ ಮೂರು ವಿಮಾನ ಖರೀದಿಸಿ ಬೆಂಗಳೂರಿನಿಂದ ಮೈಸೂರು, ಹುಬ್ಬಳ್ಳಿ, ಕಲಬುರಗಿ, ಶಿವಮೊಗ್ಗ ಸೇರಿದಂತೆ ವಿವಿಧ ನಗರಗಳಿಗೆ ವಿಮಾನಯಾನ ಸೇವೆ ಒದಗಿಸುವ ಬಗ್ಗೆ ಚಿಂತನೆ ಇದೆ. ಈ ಬಗ್ಗೆ ವಿಮಾನಯಾನ ಕ್ಷೇತ್ರದ ತಜ್ಞರ ಜತೆ ಸಮಾಲೋಚಿಸಲಾಗುತ್ತಿದೆ" ಎಂದು ವಿವರಿಸಿದರು.

## ಮನೆ ಮುಂದಿದ್ದ ಕಸ ತೆಗೆಯಲು ಹೋಗಿ ವಿದ್ಯುತ್ ಸ್ಪರ್ಶ; ತಂದೆ-ಮಗ ದಾರುಣ ಸಾವು

■ವಿಜಯಸಾಕ್ಷಿ ಸುದ್ದಿ, ಬೆಳಗಾವಿ

ಮನೆಯ ಮುಂದಿದ್ದ ವಿದ್ಯುತ್ ಕಂಬದ ತಂತಿ ತಗುಲಿ ತಂದೆ ಮತ್ತು ಮಗ ಮೃತಪಟ್ಟ ದಾರುಣ ಘಟನೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಉಡಿಕೇರಿ ಗ್ರಾಮದಲ್ಲಿ ನಡೆದಿದೆ. ಮೃತ ದುರ್ದೈವಿಗಳನ್ನು ಪ್ರಭು ಹುಂಬಿ (69) ಮತ್ತು ಪುತ್ರ ಮಂಜುನಾಥ (35) ಎಂದು ಗುರುತಿಸಲಾಗಿದೆ. ಶುಕ್ರವಾರ ಮನೆ ಮುಂದಿನ ಹುಲ್ಲು ತೆಗೆಯುವ ವೇಳೆ ವಿದ್ಯುತ್ ತಗುಲಿ ತಂದೆ, ಮಗ ಸಾವಿಗೀಡಾಗಿದ್ದಾರೆ.

ಮನೆಯ ಮುಂದೆ ಬಿದ್ದಿದ್ದ ಕಸವನ್ನು ತೆಗೆಯಲು ಹೋದಾಗ ನೆಲದ ಮೇಲೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿದೆ. ಮೊದಲು ತಂದೆಗೆ ವಿದ್ಯುತ್ ತಂತಿ ತಗುಲಿದೆ. ಇದನ್ನು ನೋಡಿದ ಮಗ ಮಂಜುನಾಥ ಅವರು ತಂದೆಯನ್ನು ಪಾರುಮಾಡಲು ಯತ್ನಸಿದಾಗ ಅವರಿಗೂ ಸಹ ವಿದ್ಯುತ್ ತಗುಲಿ ಇಬ್ಬರೂ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

## ವಾರ್ಷಿಕ ಮಹಾಸಭೆ ನಾಳೆ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಬೀರಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಸಂಘದ 2022-23ನೇ ಸಾಲಿನ 11ನೇ ವರ್ಷದ ವಾರ್ಷಿಕ ಮಹಾಸಭೆಯು ರವಿವಾರ ಬೆಳಿಗ್ಗೆ 11 ಗಂಟೆಗೆ ಸಂಘದ ಕಛೇರಿಯಲ್ಲಿ ಜರಗುವುದು ಎಂದು ಸಂಘದ ಅಧ್ಯಕ್ಷ ಮಾಹಾಂತಪ್ಪ ನೀಲಗುಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗದುಗಿನ ಆದರ್ಶ ಶಿಕ್ಷಣ ಸಮಿತಿಯ ಡಿ.ಎಸ್ ಕುರ್ತುಕೋಟಿ ಮೆಮೋರಿಯಲ್ ಪದವಿಪೂರ್ವ ವಾಣಿಜ್ಯ ಮಹಾವಿದ್ಯಾಲಯದ ವಿಶ್ವಪ್ರಭ ರೋವರ್ ಹಾಗೂ ರೇಂಜರ್ಸ್ ಘಟಕದ 24 ರೇಂಜರ್‌ಗಳು ತಾವೇ ತಯಾರಿಸಿದ್ದ ರಾಖಿಗಳನ್ನು ಅರುಣೋದಯ ವಿಶೇಷ ಮಕ್ಕಳ ಶಾಲೆಯ ವಿದ್ಯಾರ್ಥಿಗಳಿಗೆ ಕಟ್ಟುವ ಮೂಲಕ ರಾಖಿ ಹಬ್ಬವನ್ನು ಆಚರಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲ ಮಲ್ಲಪ್ಪ ಹಟ್ಟಿ, ಸಿಬ್ಬಂದಿಗಳು, ರೇಂಜರ್ ಲೀಡರ್ ಅಕ್ಷತಾ ಸಂಕನೂರ ಉಪಸ್ಥಿತರಿದ್ದರು.

## ನಿಧನ ವಾರ್ತೆ

### ರೇಣುಕಾಬಾಯಿ ಬಾಕಳೆ



**ಗದಗ :** ನಗರದ ಜೋಡಮಾರುತಿ ದೇವಸ್ಥಾನ ಹತ್ತಿರ ಇರುವ ಕಿಲ್ಲಾ ಓಣಿ ನಿವಾಸಿ ಶ್ರೀಮತಿ ರೇಣುಕಾಬಾಯಿ ಅರ್ಜುನಸಾ ಬಾಕಳೆ(71) ಇವರು ಗುರುವಾರ ಮದ್ಯಾಹ್ನ 2.45ಕ್ಕೆ ನಿಧನರಾದರು. ಮೃತರ ಅಂತ್ಯಕ್ರಿಯೆ ಅದೇ ದಿನ ರಾತ್ರಿ ನೆರವೇರಿತು. ಮೃತರು ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

### ಆ. 25 ರಿಂದ ಸೆ. 8ರವರೆಗೆ 38ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಆಚರಣೆ

# ನೇತ್ರದಾನಕ್ಕೆ ಜಿಲ್ಲಾಧಿಕಾರಿಗಳು ನೋಂದಣಿ

■ವಿಜಯಸಾಕ್ಷಿ ಸುದ್ದಿ, ಗದಗ

ನೇತ್ರದಾನಕ್ಕೆ ಒಪ್ಪಿಗೆ ಸೂಚಿಸಿದ ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್ ಅವರು ನೇತ್ರದಾನಕ್ಕೆ ನೋಂದಣೆ ಮಾಡಿಕೊಂಡರು. ತಮ್ಮ ಒಪ್ಪಿಗೆ ಪತ್ರವನ್ನು ಜಿಲ್ಲಾ ಅಂಧತ್ವ ನಿಯಂತ್ರಣ ಅಧಿಕಾರಿ ಡಾ. ರಾಜೇಂದ್ರ ಬಸರಿಗಿಡದ ಅವರಿಗೆ ಹಸ್ತಾಂತರಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರದಂದು ಜರುಗಿದ ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಮಾತನಾಡಿ, ಆ. 25 ರಿಂದ ಸೆಪ್ಟಂಬರ್ 08 ರವರೆಗೆ 38ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕವನ್ನು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ನೇತ್ರದಾನ ನೋಂದಣೆ ಶಿಬಿರಗಳನ್ನು ಆಯೋಜಿಸಲಾಗುವುದು ಎಂದರು.



ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ. ರಾಜೇಂದ್ರ ಬಸರಿಗಿಡದ ಮಾತನಾಡಿ, ನೇತ್ರದಾನ ಮಾಡುವುದು ಮರಣಾ ನಂತರವೇ ನಮ್ಮ ನೇತ್ರಗಳು ಸದಾ ಜೀವಂತವಾಗಿ ರಲು ಜಿಲ್ಲೆಯ ಎಲ್ಲರೂ ನೇತ್ರದಾನಕ್ಕೆ ನೋಂದಣೆ ಮಾಡಬೇಕೆಂದರು.

ಅಂದಾಜು 1.25 ಲಕ್ಷ ಜನರು ಕಾರ್ನಿಯಾ ಸಂಬಂಧಿ ಅಂಧತ್ವದಿಂದ ಬಳಲುತ್ತಿದ್ದಾರೆ. ದಾನಕ್ಕಾಗಿ ಕಾಯುತ್ತಿರುತ್ತಾರೆ. ಒಬ್ಬ ವ್ಯಕ್ತಿ ದಾನ ಮಾಡಿದ ನೇತ್ರಗಳು ಇಬ್ಬರು ಕಾರ್ನಿಯಾ ಅಂಧರಿಗೆ ದೃಷ್ಟಿ ಮರಳಿ ನೀಡುತ್ತದೆ ಎಂದರು.

ಸಮೀಪದ ಸರಕಾರಿ ಆಸ್ಪತ್ರೆಗಳಲ್ಲಿ ಅಥವಾ ದಿನದ 24*7 ಉಚಿತ ಸಹಾಯವಾಣಿ 104 ರಾಷ್ಟ್ರೀಯ ಸಹಾಯವಾಣಿ 1800-11-4770ಕ್ಕೆ ಕರೆ ಮಾಡಿ ನೇತ್ರದಾನ ಮಾಡಿಕೊಳ್ಳಬಹುದು. ವೆಬ್‌ಸೈಟ್‌ನಲ್ಲಿ ನೋಂದಣೆ : ಜೀವ ಸಾರ್ಥಕತೆ ವೆಬ್ ಸೈಟ್ (https://www.jeevasarthakathe.karnataka.gov.in) ಮೂಲಕ ಸುಲಭದಲ್ಲಿ ನೋಂದಣೆ ಮಾಡಬಹುದಾಗಿದೆ ಎಂದರು. ತಾಲೂಕ ಆಸ್ಪತ್ರೆ ನೇತ್ರ ತಜ್ಞರಾದ ಡಾ. ಪ್ರೀತಿ ಬಿರಾದಾರ ಮಾತನಾಡಿ, ನೇತ್ರಧಾನ ನೋಂದಣೆ ಮತ್ತು ವಿತರಣೆ ಉಚಿತ ಸೇವೆ ನೇತ್ರ ಸಂಗ್ರಹಣೆಗೆ ಬೇಕಾಗುವ ಸಮಯ ಕೇವಲ 20 ನಿಮಿಷಗಳು. ನೇತ್ರ ಸಂಗ್ರಹಣೆಯ ನಂತರ ಮೃತರ ಮುಖ ವಿಕಾರವಾಗುವುದಿಲ್ಲ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ನೇತ್ರ ತಜ್ಞರು ಹಾಗೂ ಜಿಲ್ಲೆಯ ಎಲ್ಲಾ ನೇತ್ರಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka